# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 203 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 14.02.2025 • ಶುಕ್ರವಾರ • ಪುಟ:04 • ಬೆಲೆ:2
Volume:02 • Issue: 203 • PRGI No:KARKAN/2023/88055 • VIJAYANAGARA • 14.02.2025 • Friday • Page:04 • Rs:2





ಓದುಗರ ಬೆರಳ ತುದಿಗೆ ನಿಮ್ಮ ಬ್ರಾಂಡ್, ನಿಮ್ಮ ವ್ಯವಹಾರ, ಸೇವೆ/ವಿಶೇಷ ಕೊಡುಗೆಗಳನ್ನು ಹಂಪಿ ಟೈಮ್ಸ್ ಮೂಲಕ ಹೆಚ್ಚು ಓದುಗರಿಗೆ ತಲುಪಿಸಿ.

1,10,000+ Digital E-PAPER READERS

No.1 HAMPI TIMES LEADING VIJAYANAGARA District News Paper

Contact for Advertisements: 9448633038


## ದೇವಾಲಯ ದರ್ಶನ



ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ

ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ

-: ದರ್ಶನ ಸಮಯ :-
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ


## ಕೆಲಸಕ್ಕೆ ಬೇಕಾಗಿದ್ದಾರೆ

ಮೆಡಿಕಲ್ ಶಾಪ್‌ನಲ್ಲಿ ಕೆಲಸ
ಕಂಪ್ಯೂಟರ್ ಆಪರೇಟರ್ – 1
ಬಾಯ್ – 2
ಸ್ಥಳ: ಹೊಸಪೇಟೆ
ಆಸಕ್ತರು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
ಮೊ: 9739303956


## ಆನಂದ ಬಾಣ




## ಮೈಕ್ರೋ ನ್ಯೂಸ್

### ಅಂಗಡಿ, ವಾಣಿಜ್ಯ ಸಂಸ್ಥೆಗಳ ನೋಂದಾಣಿಗೆ ಅರ್ಜಿ ಅಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ ಅಡಿಯಲ್ಲಿ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳನ್ನು ನೋಂದಣಿ ಮಾಡಿಸಿಕೊಳ್ಳದಿರುವ ಎಲ್ಲಾ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಮಾಲೀಕರು ಇ-ಕಾರ್ಮಿಕ ತಂತ್ರಾಂಶದಲ್ಲಿ ಅರ್ಜಿ ಸಲ್ಲಿಸಿ ನೋಂದಣಿ ಮಾಡಿಸಿಕೊಳ್ಳಬೇಕು. ನೋಂದಣಿ ಅಧಿಕಾರಿಗಳು : ಇಲಾಖೆಯ ಹಿರಿಯ ಕಾರ್ಮಿಕ ನಿರೀಕ್ಷಕರು ಮತ್ತು ಕಾರ್ಮಿಕ ನಿರೀಕ್ಷಕರು ನೋಂದಾಣಿ ಅಧಿಕಾರಿಗಳಾಗಿರುತ್ತಾರೆ.

ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ವೆಬ್‌ಸೈಟ್ http://www.ekarmika.karnataka.gov.in/ekarmika/static/Home.aspx ನಲ್ಲಿ ಅರ್ಜಿ ಸಲ್ಲಿಸಿ ನೋಂದಣಿ ಮಾಡಿಕೊಳ್ಳುವಂತೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ ಸಂಖ್ಯೆ.155214 ಹಾಗೂ ಇ-ಮೇಲ್ ವಿಳಾಸ ekarmikalabour@gmail.com ಸಂಪರ್ಕಿಸಲು ಕಾರ್ಮಿಕ ಇಲಾಖೆ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎತ್ತಿನ ಬಂಡಿಗಳಲ್ಲೇ ಆಗಮಿಸಿ ಪರಂಪರೆ ಮುಂದುವರೆಸುತ್ತಿರುವ ಭಕ್ತರು | ಕಾರಣಿಕೋತ್ಸವ ಶ್ರದ್ದೆ, ಭಕ್ತಿಯ ಧ್ಯೊತಕ

# ಮೈಲಾರ ಜಾತ್ರೆಯಲ್ಲಿ ಭಕ್ತಿಪ್ರವಾಹ

## ತುಂಗಾಭದ್ರ ತೀರದಲ್ಲಿ ಏಳುಕೋಟಿ ಮೈಲಾರಲಿಂಗೇಶ್ವರ ಸ್ವಾಮಿಗೆ ಸಂಪ್ರದಾಯ ಪರಂಪರೆಯ ಉತ್ಸವ

## ಡಂಕನಮರಡಿ ಪ್ರದೇಶದಲ್ಲಿ ಸದ್ದಲೇ...ಯತ್ತ ಚಿತ್ತ | ಲಕ್ಷಾಂತರ ಜನರ ಸದ್ದಡಗಿಸುವ ಗೊರವಯ್ಯ ನುಡಿ

ಈಗ ಜಾತ್ರೆಗಳ ಸುಗ್ಗಿ ಕಾಲ. ನಾಡಿನ ಪ್ರತಿಯೊಂದು ಊರುಗಳಲ್ಲಿ ಪಾರಂಪರಿಕ ಜಾತ್ರೆಗಳು ಪ್ರಾರಂಭಗೊಂಡಿವೆ. ವಿಜಯನಗರ ಬಳ್ಳಾರಿ ಜಿಲ್ಲೆಗಳಲ್ಲಿ ಸಹ ಧಾರ್ಮಿಕ ಚಾರಿತ್ರಿಕವಾದ ಪ್ರಸಿದ್ಧ ಜಾತ್ರೆಗಳು ನಡೆಯುತ್ತವೆ. ಇವುಗಳಲ್ಲಿ ವಿಶೇಷವಾಗಿ ಫೆಬ್ರವರಿ ತಿಂಗಳಲ್ಲಿ ಮೈಲಾರ ಜಾತ್ರೆ, ಕೊಟ್ಟೂರು ಗುರು ಬಸವೇಶ್ವರ ಜಾತ್ರೆ, ಕುರುವತ್ತಿ ಬಸವೇಶ್ವರ ಜಾತ್ರೆ, ಉಜ್ಜನಿ ಮರುಳಸಿದ್ದೇಶ್ವರ, ಕುರುಗೋಡು ಬಸವೇಶ್ವರ, ಗೋಣಿ ಬಸವೇಶ್ವರ, ಹಂಪಿ ಪಂಪಾ ವಿರೂಪಾಕ್ಷ ಜಾತ್ರೆ ಹೀಗೆ ಬಳ್ಳಾರಿ ವಿಜಯನಗರದ ಜಾತ್ರೆಗಳು, ನಾಡಿನ ಬಹುದೊಡ್ಡ ಜಾತ್ರೆಗಳಲ್ಲಿ ಇವು ಸಹ ಪ್ರಮುಖವಾದವುಗಳು. ಭಾರತ ಹುಣ್ಣಿಮೆ ಎರಡನೆಯ ದಿನಕ್ಕೆ ನಡೆಯುವ ಮೈಲಾರದ ಏಳು ಕೋಟಿ ಜಾತ್ರೆ ನಾಡಿನಲ್ಲೇ ಅತ್ಯಂತ ಪ್ರಸಿದ್ಧವಾದ ಜಾತ್ರೆ.



ಎಂ.ಎಂ.ಶಿವಪ್ರಕಾಶ
ಲೇಖಕರು: ಹೊಸಪೇಟೆ
ಮೊ: 9449654489
Scan For Digital Colourful
HAMPI TIMES E-paper

ಮೈಲಾರ ಒಂದು ಪುಟ್ಟ ಗ್ರಾಮ. ಈ ಗ್ರಾಮದಲ್ಲಿ ನಡೆಯುವ ಮೈಲಾರಲಿಂಗನ ಜಾತ್ರೆ ನಮ್ಮ ಮೂಲ ಜನಪದ ಆಚರಣೆಗಳು, ಪರಂಪರೆಯಂತೆ, ಸಂಪ್ರದಾಯದಂತೆ ನಡೆದುಕೊಂಡು ಬಂದಿದೆ. ಸಮೃದ್ಧ ಜಾನಪದ ಸೊಗಡಿನ ರಾಜ್ಯದ ಅತಿ ದೊಡ್ಡಜಾತ್ರೆ. ತುಂಗ ಭದ್ರಾ ನದಿಯ ತೀರದಲ್ಲಿರುವ ಮೈಲಾರ ಕ್ಷೇತ್ರದಲ್ಲಿ ರಥ ಸಪ್ತಮಿಯಿಂದ ಭಾರತ ಹುಣ್ಣಿಮೆ ನಂತರದ ಕಾರ್ಣಿಕದವರೆಗೆ ಏಳುಕೋಟೆ ಮೈಲಾರಲಿಂಗನ ಜಾತ್ರೆಯ ಸಡಗರ ಸಂಭ್ರಮ. ಈ ಜಾತ್ರೆಗೆ ನಾಡಿನ ತುಂಬಾ ಹಾಗೂ ಹೊರರಾಜ್ಯಗಳಿಂದಲೂ ಲಕ್ಷಾಂತರ ಜನರ ಭಕ್ತ ಸಮೂಹ ಹರಿದು ಬರುತ್ತದೆ. ಭಾರತ ಹುಣ್ಣಿಮೆಯ ಎರಡನೆಯ ದಿನ ನೆಡೆಯುವ ಕಾರ್ಣಿಕೋತ್ಸವ ಭಕ್ತರ ದೃಷ್ಟಿಯಲ್ಲಿ ಭವಿಷ್ಯ ನಿರ್ಧರಿಸುವ ಒಂದು ಕ್ಷಣ. ಇದೊಂದು ವರ್ಣಮಯ ಧಾರ್ಮಿಕ, ಸಂಪ್ರದಾಯಕ, ಸಾಂಸ್ಕೃತಿಕ ಪರಂಪರಯ ಆಚರಣೆ ಈ ಜಾತ್ರೆ. ಈ ಕುರಿತು ಒಂದಿಷ್ಟು ಮಾಹಿತಿ.

ಮೈಲಾರ ಈಗಿನ ವಿಜಯನಗರ ಜಿಲ್ಲೆಯ ಒಂದು ಪುಟ್ಟ ಗ್ರಾಮ. ಈ ಗ್ರಾಮದಲ್ಲಿ ನಡೆಯುವ ಏಳು ಕೋಟಿ ಮೈಲಾರಲಿಂಗನ ಜಾತ್ರೆ ದೇಶ ವಿದೇಶಗಳ ಅಧ್ಯಯನಕಾರರ ಸಂಶೋಧಕರ ವಿದ್ವಾಂಸರ ಗಮನ ಸೆಳೆದಿದೆ. ಈ ಕುರಿತು ಸಾಕಷ್ಟು ಅಧ್ಯಯನ, ಸಂಶೋಧನೆಗಳು, ವಿಶ್ಲೇಷಣೆಗಳು, ಹಲವಾರು ಪುಸ್ತಕಗಳು ಈ ಪರಂಪರೆಯ ಮೇಲೆ ಪ್ರಕಟಗೊಂಡಿವೆ. ಮೈಲಾರದ ಜಾತ್ರೆಯಲ್ಲಿ ನಡೆಯುವ ಕಾರ್ಣಿ ಕೋತ್ಸವ, ಸರಪಳಿ ಪವಾಡ, ಕಾಲು ಪವಾಡ, ಕೈ ಪವಾಡ, ದೋಣಿ ಸೇವೆ, ಕುದುರೆ ಸೇವೆ ಮೊದಲಾದ ಪಾರಂಪರಿಕ ಆಚರಣೆಗಳಿಂದ ಹಾಗೂ ಕಠಿಣ ವ್ರತಗಳಿಂದ ಈ ಜಾತ್ರೆ ಪ್ರಸಿದ್ಧಿ ಪಡೆದಿದೆ. ಪೌರಾಣಿಕ ಹಾಗೂ ಚಾರಿತ್ರಿಕ ಹಿನ್ನೆಲೆಯನ್ನು ಹೊಂದಿರುವ ಮೈಲಾರಲಿಂಗನನ್ನು, ಮೈಲಾರ, ಮಾತಾರ್ಂಡ, ಭೈರವ, ಮಲ್ಲಾರಿ, ಮಾಲತೇಶ ಮಲ್ಲಯ್ಯ ಮಲ್ಲಿಕಾರ್ಜುನ ಏಳು ಕೋಟಿ ಮುಂತಾದ ಹೆಸರುಗಳಿಂದ ಕರೆಯಲ್ಪಡುತ್ತಿದೆ. ಜಾತಿ ವ್ಯವಸ್ಥೆ ಜಾರಿಗೆ ಬರುವ ಮುನ್ನ ಎಲ್ಲ ಜನಾಂಗದ ಜನರ ಆರಾಧ್ಯ ದೈವ ಮೈಲಾರಲಿಂಗನೇ ಆಗಿದ್ದ ಎಂದಿದ್ದಾರೆ ವಿದ್ವಾಂಸರು. ಕುರುಬರಷ್ಟೇ ಅಲ್ಲದೆ ಈಗಲೂ ಬ್ರಾಹ್ಮಣರು ಲಿಂಗಾಯಿತರು ಇತರೆ ಜನಾಂಗದ ದೈವ ಮೈಲಾರ ಲಿಂಗನೇ ಆಗಿದ್ದಾನೆ. ಮಹಾರಾಷ್ಟ್ರದಲ್ಲಿ ಖಂಡೋಬ ಎಂದು ಕರೆಯುತ್ತಿದ್ದಾರೆ. ಈ ಮೈಲಾರಕ್ಕೆ ಹಿರೇ ಮೈಲಾರ, ಮಣ್ಣು ಮೈಲಾರ, ಎಂಬ ಹೆಸರುಗಳು ರೂಢಿಯಲ್ಲಿವೆ.

ಮೈಲಾರಲಿಂಗಕ್ಕೆ ತನ್ನದೇ ಆದ ಪೌರಾಣಿಕ ಧಾರ್ಮಿಕ ಹಿನ್ನೆಲೆ ಇದೆ ಮಣಿಕಾಸುರ ಹಾಗೂ ಮಲ್ಲಾಸುರರೆಂಬ ರಾಕ್ಷಸರ ಉಪಟಳ ಭೂಲೋಕದಲ್ಲಿ ಹೆಚ್ಚಾದಾಗ ಆ ರಾಕ್ಷಸರ ಸಂಹಾರಕ್ಕಾಗಿ ಶಿವನು ಕೈಲಾಸದಿಂದ ಭೂಲೋಕಕ್ಕೆ ಈ ಕ್ಷೇತ್ರದಲ್ಲಿ ಭೂ ಲಿಂಗ ರೂಪದಲ್ಲಿ ಹುತ್ತದಲ್ಲಿ ಒಡಮೂಡಿ ಮಲ್ಲಾಸುರ ಮಣಿಕಾಸುರರನ್ನು ಸಂಹಾರ ಮಾಡಿದನೆಂದು ಅಂದಿನಿಂದ ಈ ಪರಂಪರೆ ನಡೆದುಕೊಂಡು ಬಂದಿದೆ ಎನ್ನುತ್ತಾರೆ.

ವರ್ಷ ಪೂರ್ತಿ, ಹುಣ್ಣಿಮೆ, ಅಮಾವಾಸ್ಯೆಗಳಲ್ಲಿ, ಇತರೆ ದಿನಗಳಲ್ಲಿ ವಿಶೇಷವಾದ ಪೂಜೆ ಮೈಲಾರನಿಗೆ ಸಲ್ಲುತ್ತದೆ. ಯುಗಾದಿ ಪಾಡ್ಯದಂದು ಪಡ್ಡನಿಗೆ ಹೊರಡುವ ಕಾರ್ಯಕ್ರಮವಿರುತ್ತದೆ. ನಿಶಾನೆ ಸಹಿತವಾಗಿ ವಾಲಗ ಹೊರಡುತ್ತದೆ ಅಂದು ಊರಿನ ಎಲ್ಲ ದೇವರುಗಳಿಗೆ ಪೂಜೆ ಸಲ್ಲುತ್ತದೆ. ಆಗಿ ಹುಣ್ಣಿಮೆಗೆ ಮೈಲಾರಲಿಂಗ ಹಾಗೂ ಗಂಗೆ ಮಾಳಮ್ಮನ ಲಗ್ನ ಕಾರ್ಯ ನಡೆಯುತ್ತದೆ. ವರ್ಷಪೂರ್ತಿ ನಡೆಯುವ ಕಾರ್ಯಕ್ರಮದಲ್ಲಿ ರಥಸಪ್ತಮಿಯ 11ನೇ ದಿನ ಮುಖ್ಯವಾದ ಕಾರ್ಣಿಕೋತ್ಸವ ನಡೆಯುತ್ತದೆ. ಈ ಕಾರಣಕ್ಕಾಗಿ ಲಕ್ಷ ಲಕ್ಷ ಜನ ಪ್ರವಾಹದಂತೆ ಮೈಲಾರವನ್ನು ಬಂದು ಸೇರಿಕೊಳ್ಳುತ್ತಾರೆ. ಮುಖ್ಯ ಗುಡಿಯಿಂದ ಊರಿಗೆ ಸ್ವಲ್ಪ ದೂರದಲ್ಲಿರುವ ಡೆಂಕಣ ಮರಡಿಗೆ ಬೆಳಗಿನ ಜಾವ ಮೈಲಾರಲಿಂಗನ ಮೌನ ಮೆರವಣಿಗೆ ನಡೆಯುತ್ತದೆ. ಶಿವನು ಮಣಿಕಾಸುರ ಮಲ್ಲಾಸುರ ಎಂಬ ಅಸುರರನ್ನು ಸಂಹರಿಸಲು ಸದ್ದು ಗದ್ದಲವಿಲ್ಲದೆ ಹೋಗುವ ಮೌನ ಮೆರವಣಿಗೆ. ಡೆಂಕನ ಮರಡಿಯಲ್ಲಿ



### ಪವಾಡಗಳು

ಮೈಲಾರಲಿಂಗನ ಪರಂಪರೆ ಸಂಪ್ರದಾಯದಲ್ಲಿ ಹಿಂದಿನಿಂದಲೂ ಕೆಲವು ಪವಾಡಗಳು ನಡೆಯುತ್ತಾ ಬಂದಿವೆ, ಕಾರ್ಣಿಕದ ಮರುದಿನ ಗೋರವಪ್ಪ ಈ ಪವಾಡಗಳನ್ನು ಮಾಡುತ್ತಾರೆ.ಇವು ಸುಲಭದ ಪವಾಡಗಳೇನು ಅಲ್ಲ ಕಾಲು ಪವಾಡ, ಕೈ ಪವಾಡ, ಮೊದಲಾದವು ಕಠಿಣ ಪವಾಡಗಳೆ ಆಗಿವೆ. ಕಾಲಿನ ಕೆಳಭಾಗದಲ್ಲಿ ಶಸ್ತ್ರವನ್ನು ಒಂದು ಬದಿಯಿಂದ ಚುಚ್ಚಿಕೊಂಡು ಮತ್ತೊಂದು ಬದಿಗೆ ಕಾಲಿನಲ್ಲಿ ಹಾದು ಬರುವಂತೆ ಚುಚ್ಚಿ ಎಳೆದುಕೊಳ್ಳುತ್ತಾನೆ. ಕಾಲು ಪವಾಡದಂತೆ ಕೈ ಪವಾಡವು ನಡೆಯುತ್ತದೆ. ಅಂಗೈಯಲ್ಲಿ ಸಲಾಕೆಯನ್ನು ಚುಚ್ಚಿಕೊಂಡು ಅದರ ಮೇಲೆ ಆರತಿಯನ್ನು ಹಚ್ಚಿಕೊಂಡು ದೇವರಿಗೆ ಬೆಳಗುತ್ತಾನೆ. ಇದಲ್ಲದೆ ಸರಪಳಿ ಪವಾಡವು ನಡೆಯುತ್ತದೆ ಕಬ್ಬಿಣದ ಸರಪಳಿಯ ಒಂದು ಬದಿಯನ್ನು ಬಿಗಿಯಾಗಿ ಕಟ್ಟಿ ಇನ್ನೊಂದು ಬದಿಯನ್ನು ಜೋರಾಗಿ ಜಾಡಿಸಿ ಎಳೆಯುತ್ತಾರೆ ಆಗ ಸರಪಳಿ ತುಂಡಾಗುತ್ತದೆ ಇದಕ್ಕೆ ಸರಪಳಿ ಹರಿಯುವುದು ಅಥವಾ ಸರಪಳಿ ಪವಾಡವೆಂದು ಕರೆಯುತ್ತಾರೆ

ಮಣಿಕಾಸುರ ಮತ್ತು ಮಲ್ಲಾಸುರ ಎಂಬ ಅಸುರರು ವಾಸವಾಗಿದ್ದರು ಎಂಬುದು ಜನಪದರ ನಂಬಿಕೆ. ಇವರನ್ನು ಸಂಹರಿಸಲು ಮೌನವಾಗಿ ಸವಾರಿ ಮಾಡಿ ಅವರನ್ನು ಸಂಹಾರ ಮಾಡುತ್ತಾರೆ, ಆಗ ಚಾಂಗುಬಲೋ ಚಾಂಗುಬಲೋ ಎಂಬ ಘೋಷಣೆಗಳನ್ನು ಮೊಳಗಿಸುತ್ತಾ ಹಿಂದಕ್ಕೆ ಮರಳುತ್ತಾರೆ. ಅದೇ ದಿನ ಸಂಜೆ ಐದು ಗಂಟೆಗೆ ಕಾರ್ಣಿಕೋತ್ಸವ ನಡೆಯುತ್ತದೆ. ಈ ಕಾರಣಿಕೋತ್ಸವವನ್ನು ಕೇಳಲು ಲಕ್ಷಾಂತರ ಜನರು ಭಕ್ತಿ, ಶ್ರದ್ದೆಗಳಿಂದ ಸೇರಿರುತ್ತಾರೆ. ಭವ್ಯ ಮೆರವಣಿಗೆಯಲ್ಲಿ ಬರುತ್ತಾರೆ ಒಡೆಯರ್ ಹಾಗೂ ಕಾರಿಣಿಕದ ಗೊರವಪ್ಪ. ಕಾರಣಿಕದ ಗೊರವಪ್ಪ ಸುಮಾರು ಹದಿನೈದು ಅಡಿ ಎತ್ತರದ ಬಿಲ್ಲನ್ನು ಏರಿ ಭವಿಷ್ಯದ ನುಡಿಯನ್ನು ನುಡಿಯುತ್ತಾನೆ. ಸರಸರನೇ ಬಿಲ್ಲನ್ನು ಏರಿ ನಿಂತ ಗೊರವಪ್ಪ ಸುತ್ತಲೂ ಕ್ಷಣ ವೀಕ್ಷಿಸಿ ಸದ್ದಲೇ!, ಎನ್ನುತ್ತಾನೆ, ಆ ಕ್ಷಣದಲ್ಲಿ ಜನರ ಸದ್ದಡಗಿ ಆತನು ಹೇಳುವ ಭವಿಷ್ಯದ ಕಡೆ ಎಲ್ಲರ ಲಕ್ಷ್ಯ. ಒಂದು ಸಾಲಿನ ನುಡಿಗಟ್ಟನ್ನು ಹೇಳಿ ಕೆಳಗೆ ಬೀಳುತ್ತಾನೆ. ಇದು ಆ ವರ್ಷದ ಭವಿಷ್ಯವನ್ನು ಹೇಳುತ್ತದೆ. ರೈತರು ಜನಪದರು ವರ್ಷದ ಮಳೆ ಬೆಳೆ ಕುರಿತು ವಿಶ್ಲೇಷಣೆ ಮಾಡುತ್ತಾರೆ ಆದರೆ ಇತ್ತೀಚಿನ ವರ್ಷಗಳಲ್ಲಿ ಇದು ರಾಜಕೀಯದ ವಿಶ್ಲೇಷಣೆಗೂ ಬಳಕೆಯಾಗುತ್ತಿದೆ.

ಮೈಲಾರಲಿಂಗನ ಕಾರ್ಣಿಕದಲ್ಲಿ ನುಡಿದ ಕೆಲವು ಕಾರ್ಣಿಕಗಳು ಹೀಗಿವೆ. ಮುತ್ತಿನ ಮಳೆ ಸುರಿದಿತಲೆ ಬಹುಪರಾಕ್, ಅಂಬಲಿ ಹಳಸಿತಲೇ ಪರಾಕ್, ಸಂಪಲೇ ಬಹುಪರಾಕ್, ಮಳೆ ಬೆಳೆ ಸಂಪಲೇ ಬಹುಪರಾಕ್ ಆಕಾಶಕ್ಕೆ ಸಿಡಿಲು ಬಡಿತಲೇ ಬಹುಪರಾಕ್, ಕಲಕು ಮಲಕು ಆದಿತಲೇ ಪರಾಕ್, ಆಕಾಶಕ್ಕೆ ಗುಂಡು ಬಿತ್ತಲೇ ಪರಾಕ್, ಹೀಗೆ ನೂರಾರು ವರ್ಷಗಳಿಂದ ಈ ಕಾರ್ಣಿಕದ ನುಡಿಗಟ್ಟುಗಳನ್ನು ಹೇಳುತ್ತ ಬಂದಿದ್ದಾರೆ.

### ಜಾನಪದ ಸೊಗಡಿನ ಜಾತ್ರೆ ಮೈಲಾರ ಜಾತ್ರೆ

ಮೈಲಾರಲಿಂಗನ ಭಕ್ತರು ತಾವು ಬೇಡಿಕೊಂಡಂತೆ ತಮ್ಮ ಕೈಲಾದ ಸೇವೆಗಳನ್ನು ಜಾತ್ರೆಯಲ್ಲಿ ನೆರವೇರಿಸುತ್ತಾರೆ. ಕಾಯ್ಕೋಲು, ದೀವಿಟಿಗೆ ಸೇವೆ, ದೋಣಿ ಸೇವೆ, ಕುದುರೆ ಸೇವೆ ಮೊದಲಾದವುಗಳು. ಕುದುರೆ ಸೇವೆ ಸ್ವಲ್ಪ ಭಿನ್ನವಾದ ಸೇವೆ. ಕಾಲಿಗೆ ಗೆಜ್ಜೆ ಕಟ್ಟಿಕೊಂಡು ಕುದುರೆ ಕುಣಿಯವಂತೆ ಲಯಬದ್ಧವಾಗಿ ಕುಣಿಯುತ್ತ ಚಾಟಿಯಿಂದ ತಮ್ಮನ್ನು ತಾವೇ ಪಡೆದುಕೊಳ್ಳುತ್ತಾರೆ ಹೀಗೆ ತಾಸುಗಟ್ಟಲೆ ತಮ್ಮ ದೇಹವನ್ನು ದಂಡಿಸಿಕೊಂಡು ತಮ್ಮ ಕುದುರೆ ಸೇವೆಯನ್ನು ಪೂರೈಸುತ್ತಾರೆ. ದೋಣಿ ಸೇವೆ ಬೇರೆ ಯಾವ ಸಂಪ್ರದಾಯದಲ್ಲಿಯೂ ಕಂಡು ಬಂದಂತಿಲ್ಲ. ಮೈಲಾರಲಿಂಗನ ಸಂಕೇತಗಳಲ್ಲಿ ದೋಣಿಯು ಒಂದು. ದೋಣಿಯನ್ನು ತುಂಬಿಸುವ ಕಾರ್ಯವನ್ನು ಭಕ್ತರು ಜಾತ್ರೆಯಲ್ಲಿ ಮಾಡುತ್ತಾರೆ. ಬಾಳೆಹಣ್ಣು ಸಕ್ಕರೆ ಬೆರೆಸಿದ ಮಿಶ್ರಣಕ್ಕೆ ಹಣ್ತುಪ್ಪ ಎಂದು ಹೆಸರು. ಈ ಹಣ್ತುಪ್ಪವನ್ನು ದೋಣಿಯಲ್ಲಿ ತುಂಬುತ್ತಾರೆ. ಗೊರವ ಗೊರವಿಯರು ಇದನ್ನು ಊಟ ಮಾಡುತ್ತಾರೆ.

ಈ ನಾಡಿನ ಜಾನಪದ ಸಾಂಸ್ಕೃತಿಕ ಪರಂಪರೆ ಜಾತ್ರೆಗಳಲ್ಲಿ ಮೈಲಾರ ಜಾತ್ರೆ ಪ್ರಮುಖವಾದದ್ದು. ಈ ಜಾತ್ರೆಗೆ ಪರಂಪರೆಯಂತೆ ಎತ್ತಿನ ಬಂಡಿಗಳಲ್ಲೇ ಜಾತ್ರೆಗೆ ಬರುತ್ತಿರುವುದು ಜನರ ಶ್ರದ್ದೆ, ಭಕ್ತಿಯ ಧ್ಯೊತಕವಾಗಿದೆ. ರಾಜ್ಯದ ಪ್ರತಿಷ್ಠಿತ ಜಾತ್ರೆಯಾಗಿ ಇದು ನಡೆಯುತ್ತಾ ಬಂದಿದೆ ಇಷ್ಟೊಂದು ದೊಡ್ಡ ಜಾನಪದ ಸಾಂಸ್ಕೃತಿಕ ಪರಂಪರೆಯ ಜಾತ್ರೆ, ಮತ್ತೊಂದು ಜಾತ್ರೆ ಕಾಣಿಸುವುದಿಲ್ಲ. ಇದು ಈ ನಾಡಿನ ಹೆಮ್ಮೆಯ ಜಾನಪದ ಸೊಗಡಿನ ಜಾತ್ರೆ ಮೈಲಾರ ಜಾತ್ರೆ.

ಎನ್‌ಎಚ್ 63 ಸುಗಮ ಸಂಚಾರಕ್ಕೆ ಅಡೆತಡೆ, ಜಿಲ್ಲಾಮಟ್ಟದ ರಸ್ತೆ ಸುರಕ್ಷತಾ ಸಭೆಯಲ್ಲಿ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಸೂಚನೆ

# ಅಧಿಕಾರಿಗಳು, ಗುತ್ತಿಗೆದಾರರ ವಿರುದ್ಧ ಪ್ರಕರಣ ದಾಖಲಿಸಿ

## ಬಸ್ ನಿಲ್ದಾಣಗಳಲ್ಲಿ ಅನೈತಿಕ ಚಟುವಟಿಕೆಗಳು ಕಡಿವಾಣ ಹಾಕಿ | ಕಾಲೇಜ್ ರಸ್ತೆಯುದ್ದಕ್ಕೂ ಕಾರ್ ಪಾರ್ಕಿಂಗ್ ವ್ಯವಸ್ಥೆ ಆಗಲಿ

**ಹಂಪಿ ಟೈಮ್ಸ್ ಹೊಸಪೇಟೆ**

ರಾಷ್ಟ್ರೀಯ ಹೆದ್ದಾರಿ 63 ಹೊಸಪೇಟೆ ಬಳ್ಳಾರಿ ರಸ್ತೆಯಲ್ಲಿ ಸುಗಮ ಸಂಚಾರಕ್ಕೆ ಅಡೆತಡೆ ಇರುವ ಸ್ಥಳವನ್ನು ಪರಿಶೀಲಿಸಿ ಸೂಕ್ತ ಕ್ರಮಕ್ಕೆ ಮುಂದಾಗಿರುವ ಎನ್‌ಎಚ್‌ಎಐ ಅಧಿಕಾರಿಗಳು ಮತ್ತು ಗುತ್ತಿಗೆದಾರನ ವಿರುದ್ಧ ಪ್ರಕರಣ ದಾಖಲಿಸುವಂತೆ ಜಿಲ್ಲಾದಿ ,ಕಾರಿ ಎಂ.ಎಸ್.ದಿವಾಕರ್ ಸೂಚನೆ ನೀಡಿದ್ದಾರೆ.

ನಗರದ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ನಡೆದ ರಸ್ತೆ ಸುರಕ್ಷತಾ ಸಮಿತಿ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಗುರುವಾರ ಮಾತನಾಡಿದರು, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಅಧಿಕಾರಿಗಳು ಗುಂಡಿಗಳನ್ನು ಮುಚ್ಚದೇ ಇರುವುದರಿಂದ ಸುಗಮ ಸಂಚಾರಕ್ಕೆ ಅಡೆತಡೆ ಯಾಗಿದೆ. ಅಪಘಾತಗಳು ಸಂಭವಿಸಿದರೇ ಅವರೇ ನೇರಹೊಣೆಯಾಗಿರುತ್ತಾರೆ. ಬಾಕಿ ಉಳಿದ ರಸ್ತೆಗಳಲ್ಲಿ ವೈಜ್ಞಾನಿಕವಾಗಿ ಸ್ಪೀಡ್ ಬ್ರೇಕರ್ಸ್ ಹಾಗೂ ಸೈನ್‌ಬೋರ್ಡ್‌ಗಳನ್ನು ಅಳವಡಿಸಲು ಕ್ರಮ ವಹಿಸಬೇಕಿದೆ. ತಾಲೂಕು ಮಟ್ಟದ ರಸ್ತೆಗಳಲ್ಲಿ ರೈತರು ರಸ್ತೆ ಮೇಲೆ ಧಾನ್ಯಗಳನ್ನು ಒಕ್ಕುವುದು, ಒಣಗಿಸುವಂತಹ ಕೃಷಿ ಚಟುವಟಿಕೆಗಳನ್ನು ನಿಲ್ಲಿಸಬೇಕು. ಇದರಿಂದಾಗಿ ಸಾರ್ವಜನಿಕರ ಸಂಚಾರಕ್ಕೆ ತೊಂದರೆಯಾಗುವುದಲ್ಲದೇ, ಕೆಲವು ವೇಳೆ ಬೆಂಕಿ ಅವಘಡಗಳು ಹಾಗೂ ರಸ್ತೆ ಅಪಘಾತಗಳು ಸಂಭವಿ ಸುತ್ತಿವೆ. ಈ ಬಗ್ಗೆ ಅಧಿಕಾರಿಗಳು ಸೂಕ್ತ ಕ್ರಮ ವಹಿಸಬೇಕು. ಹೊಸಪೇಟೆ ಬಸ್‌ನಿಲ್ದಾಣದಲ್ಲಿ ಸಿಸಿ ಕ್ಯಾಮೆರಾಗಳ ಕ್ಷಮತೆ ಹಾಗೂ ಮಾನಿಟರ್‌ಗಳನ್ನು ಪರಿಶೀಲಿಸಿ ಶೀಘ್ರವೇ ಬದಲಿಸಿ ಅಳವಡಿಸುವಂತೆ ಹಾಗೂ ಅನೈತಿಕ ಚಟುವಟಿಕೆಗಳು ನಡೆಯದಂತೆ ಎಚ್ಚರವಹಿಸಲು ಸೂಚಿಸಿ ದರು. ನಗರ ವ್ಯಾಪ್ತಿಯಲ್ಲಿ ಒಟ್ಟು 20 ಭಾಗಗಳಲ್ಲಿ ಆಟೋ ಸ್ಟಾಂಡ್‌ಗಳನ್ನು ಗುರುತಿಸಿದ್ದು, ಅಗತ್ಯವಿರುವ 10 ಭಾಗದಲ್ಲಿ ಆಟೋಸ್ಟಾಂಡ್‌ಗಳನ್ನು ಸುಸಜ್ಜಿತವಾಗಿ ನಿರ್ಮಿಸುವಂತೆ ತಿಳಿಸಿದರು. ಪುನೀತ್ ರಾಜಕುಮಾರ್ ವೃತ್ತದಿಂದ ಜಿಲ್ಲಾ ಕ್ರೀಡಾಂಗಣದವರೆಗೆ ನಾಲ್ಕು ಚಕ್ರ ವಾಹನಗಳ ಪಾರ್ಕಿಂಗ್‌ಗೆ ಸೂಕ್ತ ವ್ಯವಸ್ಥೆ ಕಲ್ಪಿಸುವಂತೆ ಸೂಚಿಸಲಾಯಿತು. ಈ ವೇಳೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿಬಾಬು, ಲೋಕೋಪಯೋಗಿ ಇಲಾಖೆ ಇಇ ಟಿ.ದೇವದಾಸ್ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿಗಳು ಭಾಗವಹಿಸಿದ್ದರು.





# ನಾಡೋಜ ಸುಕ್ರಿ ಬೊಮ್ಮಗೌಡ ನಿಧನ ಜಾನಪದ ಲೋಕಕ್ಕೆ ತುಂಬಲಾರದ ನಷ್ಟ

**ಹಂಪಿ ಟೈಮ್ಸ್ ಹೊಸಪೇಟೆ**

ಕನ್ನಡ ವಿಶ್ವವಿದ್ಯಾಲಯದ ನಾಡೋಜ ಪದವಿ ಪುರಸ್ಕೃತೆ ಶ್ರೀಮತಿ ಸುಕ್ರಿ ಬೊಮ್ಮಗೌಡ ಗುರುವಾರ ನಿಧನ ಹೊಂದಿದ್ದು, ಕ್ರಿಯಾಶಕ್ತಿ ಕಟ್ಟಡದ ಸಿಂಡಿಕೇಟ್ ಸಭಾಂಗಣದಲ್ಲಿ ಸಂತಾಪ ಸೂಚಕ ಸಭೆಯಯಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಾ.ಡಿ.ವಿ. ಪರಮಶಿವಮೂರ್ತಿ ಮಾತನಾಡಿ, ಹಾಲಕ್ಕಿ ಒಕ್ಕಲಿಗ ಬುಡಕಟ್ಟು ಮೂಲತಃ ಮಾತೃಪ್ರದಾನ ಸಮಾಜವಾಗಿದೆ. ಅತ್ಯಂತ ಪ್ರತಿಭಾವಂತ ಕಲಾವಿದೆಯಾದ ಸುಕ್ರಿಯವರು ಪರಿಸರ ಚಳುವಳಿ, ಮಧ್ಯಪಾನ ವಿರೋಧಿ ಚಳುವಳಿಗಳಲ್ಲಿ ನಾಯಕಿಯಾಗಿ ಹೋರಾಟ ನಡೆಸಿದ್ದಾರೆ. ಸುಕ್ರಿಯವರು ನಾಡಿನ ಶೋಷಿತರನ್ನು ಪ್ರತಿನಿಧಿಸುತ್ತ ಬಂದಿದ್ದಾರೆ. ಹಾಲಕ್ಕಿಗಳ ಹಾಲಕ್ಕಿಗಳ ಪಾರಂಪರಿಕ ತಿಳುವಳಿಕೆ ತನ್ನ ತಲೆಮಾರಿಗೆ ಮುಗಿದು ಹೋಗಬಾರದೆಂದು ಸುಕ್ರಿಯವರು ಹಾಲಕ್ಕಿ ಮಹಿಳೆಯರನ್ನು ಒಂದುಗೂಡಿಸಿ ತನ್ನ ಸಮುದಾಯದ ಪ್ರಾಚೀನ ಕುಣಿತಗಳಾದ ತಾರ್ಲೆ, ಪಗಡೆ, ಬಿದರಂಡೆ ಮುಂತಾದ ನೃತ್ಯ ಪ್ರಕಾರಗಳನ್ನು ಕಲಿಸುವುದರ ಜೊತೆಗೆ ಅನೇಕ ಕಡೆ ತಾವೇ ತಮ್ಮ ತಂಡಗಳನ್ನು ಕರೆದುಕೊಂಡು ಹೋಗಿ ಹಾಲಕ್ಕಿಗಳ ಪರಂಪರೆಯನ್ನು ಜೀವಂತವಾಗಿಡಲು ಅವಿರತವಾಗಿ ಶ್ರಮಿಸಿದ್ದಾರೆ. ಸುಕ್ರಿಬೊಮ್ಮಗೌಡ ಅವರು ಸ್ವತಃ ಮಾದೇವರಾಯ, ಚಂದನರಾಯ, ರಾಮ ಲಕ್ಷ್ಮಣ, ಐರಾವತ, ಕುಂತಿ ಕಥೆ, ಸಿರಿಕವುಲಿ ಮುಂತಾದ ಕಥನ ಕಾವ್ಯಗಳನ್ನು ಮತ್ತು ಬಲೀಂದ್ರರಾಯ, ಗೋವಿಂದರಾಯ ಹಾಗು ಕರಿದೇವರ ಕುರಿತ ಮಹಾಕಥನಗಳನ್ನು ಸುಶ್ರಾವ್ಯವಾಗಿ ಹಾಡುತ್ತಿದ್ದರು.

>>4



# ಪುಲ್ವಾಮ ದಾಳಿ

ಅಂದು ಫೆಬ್ರವರಿ 14 ಇಡೀ ವಿಶ್ವವೇ ಪ್ರೇಮಿಗಳ ದಿನವನ್ನು ಸಂಭ್ರಮಿಸುತ್ತಿತ್ತು. ಆದರೆ ಜಮ್ಮು ಕಾಶ್ಮೀರದ ಪುಲ್ವಾಮದಲ್ಲಿ ಮಾತ್ರ ರಕ್ತದ ಕೋಡಿಯನ್ನು ಹರಿಸಲಾಗಿತ್ತು. ಹಾಗಾಗಿ ಈ ದಿನ ನಮ್ಮ ಭಾರತೀಯರ ಪಾಲಿಗೆ ಕರಾಳವಾದ ದಿನ.



ಫೆಬ್ರವರಿ 14 2019 ರಂದು ಮಧ್ಯಾಹ್ನದ ಹೊತ್ತಿಗೆ ಜಮ್ಮು-ಕಾಶ್ಮೀರದ ಪುಲ್ವಾಮದಲ್ಲಿ ಭಾರತೀಯ ಸೇನೆಯ ಭದ್ರತಾ ಪಡೆಗಳ ಮೇಲೆ ಅತ್ಯಂತ ಭೀಕರವಾಗಿ ಉಗ್ರಗಾಮಿಗಳು ಆತ್ಮಾಹುತಿ ದಾಳಿಯನ್ನು ನಡೆಸಿದರು. ಇದರಲ್ಲಿ 40 ಸಿಆರ್ ಪಿಎಫ್ ಯೋಧರು ಹುತಾತ್ಮರಾದರು. ಮಧ್ಯಾಹ್ನದ ಊಟವನ್ನು ಮುಗಿಸಿ ತಮ್ಮ ಕರ್ತವ್ಯಕ್ಕೆ ಹಾಜರಾಗುತ್ತಿದ್ದ ಯೋಧರು ಅನ್ಯಾಯವಾಗಿ ಮರಣವನ್ನಪ್ಪಿದ್ದರು. ಈ ದಿನವನ್ನು ಭಾರತದ ಇತಿಹಾಸದಲ್ಲಿಯೇ ಕರಾಳವಾದ ದಿನ ಎಂದು ಹೇಳಬಹುದು.

ಎರಡು ದಿನಗಳಿಂದ ತೀವ್ರ ಹಿಮಪಾತವಾಗಿದ್ದ ಕಾರಣ ಶ್ರೀನಗರದ ಹೆದ್ದಾರಿಯ ಸಂಚಾರ ಸಂಪೂರ್ಣವಾಗಿ ಸ್ಥಗಿತಗೊಂಡಿತ್ತು. ದಾಳಿ ನಡೆದ ದಿನ ಗುರುವಾರವಷ್ಟೇ ಸಂಚಾರವನ್ನು ಪುನರ್ ಆರಂಭ ಮಾಡಲಾಗಿತ್ತು. ಸಿ ಆರ್ ಪಿ ಎಫ್ ತುಕಡಿಗಳಿಂದ ಎಲ್ಲಾ ವಾಹನಗಳು ಒಟ್ಟಿಗೆ ಶ್ರೀನಗರದತ್ತ ಹೊರಟಿದ್ದವು. ಒಟ್ಟು 70 ಆರ್ಮಿ ಟ್ರಕ್ ಗಳಲ್ಲಿ ಎರಡುವರೆ ಸಾವಿರ ಸಿಆರ್‌ಪಿಎಫ್ ಯೋಧರು ಪ್ರಯಾಣಿಸುತ್ತಿದ್ದರು.

ಪುಲ್ವಾಮ ಜಿಲ್ಲೆಯ ಲೆಥ್ಪೊರ ಪ್ರದೇಶದ ಅವಂತಿಪೋರ್ ಬಳಿ ಮಧ್ಯಾಹ್ನ ಸುಮಾರು 3.15 ಸಮಯಕ್ಕೆ ಜೈಷ್-ಎ-ಮೊಹಮ್ಮದ್ ಸಂಘಟನೆಯ ಆತ್ಮಹತ್ಯ ದಾಳಿಕೋರ ಆದಿಲ್-ಅಹಮದ್-ದಾರ್ ಎಂಬಾತ 350 ಕೆಜಿ ಸ್ಫೋಟಕ ತುಂಬಿದ ವಾಹನವನ್ನು ಸಿಆರ್‌ಪಿಎಫ್ ಸೈನಿಕರ ಬೆಂಗಾವಲು ಪಡೆಯ ಒಂದು ವಾಹನಕ್ಕೆ ಗುದ್ದಿ ಈ ಹೇಯ್ಯ ಕೃತ್ಯಯನ್ನು ಎಸಗಲಾಯಿತು ಇದರಲ್ಲಿದ್ದ 40 ವೀರ ಯೋಧರು ಮರಣವನ್ನಪ್ಪಿದರು.

ಸ್ಫೋಟದ ತೀವ್ರತೆಗೆ ದಾಳಿಗೆ ತುತ್ತಾದ ವಾಹನವು ಗುರತೇ ಸಿಗದ ಮಟ್ಟಿಗೆ ವಿರೂಪಗೊಂಡಿತು. ಸಂಪೂರ್ಣ ಸಿಡಿದು ಸುಟ್ಟು ಕರಕಲಾಗಿ ಲೋಹದ ಮುದ್ದೆಯಂತಾಗಿತ್ತು. ಈ ದೃಶ್ಯವನ್ನು ನೆನೆಸಿಕೊಂಡರೆ ಮೈ ಜುಮ್ ಎಂದು ಕಣ್ಣುಗಳು ತೇವಗೊಳ್ಳುತ್ತವೆ.

ಹವಮಾನದ ವೈಪರಿತ್ಯದ ನಡುವೆ ಶತ್ರುಗಳ ಹುಟ್ಟಡಗಿಸಲು ರಾತ್ರಿ ಹಗಲೆನ್ನದೆ ತಮ್ಮೆಲ್ಲ ಸುಖ ಸಂತೋಷವನ್ನು ಬದಿಗಿಟ್ಟು ನಮ್ಮ ರಾಷ್ಟ್ರದ ಸೇವೆ ಮತ್ತು ರಕ್ಷಣೆಗಾಗಿ ತಮ್ಮ ಜೀವವನ್ನು ಮುಡುಪಾಗಿಟ್ಟು ಹುತಾತ್ಮರಾದ ಎಲ್ಲಾ ವೀರ ಯೋಧರಿಗೆ ಗೌರವಪೂರ್ವಕ ಕೋಟಿ ಕೋಟಿ ನಮನಗಳು.. ಇವರ ತ್ಯಾಗ ಬಲಿದಾನವನ್ನು ಸ್ಮರಿಸೋಣ. ಜೈಹಿಂದ್,

**– ಚೇತನ ಭಾರ್ಗವ, ಬೆಂಗಳೂರು**




> **ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ.**
> **ಕೈಯಲ್ಲೊಂದು ಕನ್ನಡ ದಿನ ಪತ್ರಿಕೆ ಇರಲಿ.**
> ಡಿ..ವಿ.ಜಿ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**-: ಸಂಪಾದಕರು :-**
**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**– ಜಾಹೀರಾತು ವ್ಯವಸ್ಥಾಪಕರು.**

## ಮನೆಗಳಲ್ಲಿ ಆರೋಗ್ಯ ಹಾಗೂ ನೈರ್ಮಲ್ಯ ಕಾಪಾಡುವಲ್ಲಿ ಗೃಹಿಣಿಯ ಪಾತ್ರ

# ಮಹಿಳೆ ಖುಷಿ ಇದ್ದರೆ ಮನೆಯೇ ನಂದನವನ

**"ನ ಗೃಹಂ ಗೃಹಮಿತ್ಯಾಹು ಗೃಹಿಣಿ ಗೃಹಮುಚ್ಯತೆ**
**ಗೃಹಂ ತು ಗೃಹಿಣಿಹೀನಮರಣ್ಯಂ ಸದೃಶಂ ಭವೇತ್"**

ಎಂಬ ಶ್ಲೋಕದಂತೆ ಕೇವಲ ಕಲ್ಲು, ಮಣ್ಣು, ಇಟ್ಟಿಗೆಯಿಂದ ನಾಲ್ಕು ಗೋಡೆಗಳನ್ನು ಕಟ್ಟಲ್ಪಟ್ಟರೆ ಅದು ಮನೆ ಎಂದಾಗಲು ಸಾಧ್ಯವಿಲ್ಲ. ಗೃಹಿಣಿಯೇ ಮನೆ ಎಂಬಂತೆ ಆ ಮನೆಯಲ್ಲಿ ಗೃಹಿಣಿ ಇದ್ದರಷ್ಟೇ ಮನೆಗೆ ಶೋಭೆ. ಗೃಹಿಣಿಯಿಲ್ಲದ ಮನೆಯು ಅದು ಮನೆಯಲ್ಲ ಕಾಡಿಗೆ ಸಮಾನ ಎಂಬುದೇ ಈ ಶ್ಲೋಕದ ಹಿಂದಿನ ತಾತ್ಪರ್ಯ.



ಒಂದು ಗೃಹ ಎನಿಸಿಕೊಳ್ಳಬೇಕಾದರೆ ಅಲ್ಲಿ ಗೃಹಿಣಿಯ ಪಾತ್ರ ಬಲು ಮುಖ್ಯ. ಗೃಹಿಣಿಯಿಲ್ಲದ ಮನೆಯನ್ನು ಕಲ್ಪನೆ ಮಾಡಲೂ ಸಾಧ್ಯವಿಲ್ಲ ಹಾಗೆಯೇ ಆ ಮನೆಯಲ್ಲಿ ಗೃಹಿಣಿಯು ನಗು ನಗುತಾ ಖುಷಿ ಖುಷಿಯಾಗಿದ್ದರೆ ಆ ಮನೆಯೇ ನಂದನವನ.

ನಾವೆಷ್ಟೇ ದುಡಿದು ಹಣ ಸಂಪಾದನೆ ಮಾಡಿ ದೊಡ್ಡ ಅರಮನೆಯಂತಹ ಬಂಗಲೆಯನ್ನು ನಿರ್ಮಿಸಿ, ಅಲ್ಲಿ ಸಕಲ ಸೌಲಭ್ಯಗಳನ್ನು ಕಲ್ಪಿಸಿ, ಬಾಗಿಲು, ಕಿಟಕಿಗಳಿಗೆ ಚಿನ್ನ, ಬೆಳ್ಳಿಯ ಲೇಪನ ಕೊಟ್ಟರೂ ಕೂಡ ಆ ಮನೆಯಲ್ಲಿ ಗೃಹಿಣಿಯಿಲ್ಲದೆ ಕಳೆ ಬರಲು ಸಾಧ್ಯವಿಲ್ಲ.

ಮನೆಯಲ್ಲಿ ಆರೋಗ್ಯ ಹಾಗೂ ನೈರ್ಮಲ್ಯ ಕಾಪಾಡುವಲ್ಲಿಯೂ ಗೃಹಿಣಿಯ ಪಾತ್ರ ಬಹು ಮುಖ್ಯವಾಗಿದೆ. ಮನೆಯ ಒಳಗೂ ಹಾಗೂ ಹೊರಗೂ ಸ್ವಚ್ಛತೆಯಿರಬಹುದು ಅಥವಾ ಆರೋಗ್ಯ ಯುತವಾದ ಆಹಾರವನ್ನು ತಯಾರಿಸುವಲ್ಲಿಯೂ ಇರಬಹುದು ಗೃಹಿಣಿಯ ಪಾತ್ರ ಬಲು ಹಿರಿದು.

ಸ್ವಚ್ಛತೆಯ ವಿಷಯಕ್ಕೆ ಬಂದರೆ ಪ್ರತಿ ನಿತ್ಯ ನೆಲವನ್ನು ಗುಡಿಸಿ, ಒರೆಸಿ ನೆಲವನ್ನು ಪಳ ಪಳ ಎಂದು ಹೊಳೆಯುವಂತೆ ಮಾಡುವುದು ಗೃಹಿಣಿಯೇ ಅಲ್ಲವೇ?!, ಗುಡಿಸಿದ ಕಸವನ್ನು ಎಲ್ಲೆಂದರಲ್ಲಿ ಬಿಸಾಡದೆ ದಿನಾಲೂ ಒಂದೇ ಕಡೆ ಹಾಕುವುಂದರಿಂದ ಅನೇಕ ಕ್ರಿಮಿ ಕೀಟಗಳು, ಸೋಂಕುಗಳಿಂದ ನಮ್ಮನ್ನು ರಕ್ಷಿಸಿಕೊಳ್ಳಬಹುದು.

ನೆಲ ಒರೆಸುವ ನೀರಿಗೆ ಡೆಟ್ಟೋಲ್ ನೊಂದಿಗೆ ಒಂದು ಚಿಟಿಕೆ ಉಪ್ಪನ್ನು ಹಾಕಿ ಒರೆಸಿದರೆ ನೈರ್ಮಲ್ಯದ ದೃಷ್ಟಿಯಿಂದ ಹಾಗೂ ಅನೇಕ ಸೋಂಕುಗಳಿಂದ ನಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಲು ಸಹಕಾರಿಯಾಗಿದೆ.ಬಟ್ಟೆ ತೊಳೆಯುವಾಗ ಸರ್ಫ್ ಜೊತೆಗೆ ಸ್ವಲ್ಪ ಬೇಕಿಂಗ್ ಸೋಡಾ ಹಾಗೂ ಉಪ್ಪನ್ನು ಹಾಕಿ ಬಟ್ಟೆಗಳನ್ನು ಸ್ವಲ್ಪ ಕಾಲ ಬಿಸಿ ನೀರಿನಲ್ಲಿ ನೆನೆ ಇಟ್ಟು, ನಂತರ ತೊಳೆದರೆ ಜಿಡ್ಡು, ವಾಸನೆಗಳಿಂದ ಮುಕ್ತಿ ಪಡೆಯಬಹುದು.

ಪಾತ್ರೆಗಳನ್ನು ಕೂಡ ಪಳ ಪಳ ಹೊಳೆಯುವಂತೆ ಮಾಡಲು ಬಿಸಿ ನೀರಿನೊಂದಿಗೆ ತೊಳೆದರೆ ಜಿಡ್ಡು, ಕ್ರಿಮಿ ಕೀಟಗಳು, ಸೂಕ್ಷ್ಮಾಣು ಜೀವಿಗಳು ನಾಶವಾಗಿ ಉತ್ತಮ ಆರೋಗ್ಯಕ್ಕಾಗಿ ಈ ವಿಧಾನ ಬಹಳ ಪ್ರಯೋಜನಕಾರಿಯಾಗಿದೆ.ಬಚ್ಚಲು ಮನೆಯನ್ನು ಶುದ್ಧವಾಗಿ ನೈರ್ಮಲ್ಯದಿಂದ ಇಟ್ಟುಕೊಳ್ಳು ವುದು ಕೂಡ ಗೃಹಿಣಿಯ ಮುಖ್ಯ ಕರ್ತವ್ಯವಾಗಿದೆ. ಬಚ್ಚಲು ಮನೆಯಲ್ಲಿ ಇರಬಹುದು ಅಥವಾ ಬೇಸಿನ್‌ನಲ್ಲಿ ಇರಬಹುದು ಎಲ್ಲಿಯೂ ನೀರು ನಿಲ್ಲದಂತೆ ಸ್ವಚ್ಛವಾಗಿ ಇಟ್ಟುಕೊಂಡರೆ ನಿರ್ಮಲವಾಗಿರುವುದು.



**ಪ್ರಜ್ಞಾ ರವೀಶ್ ಕುಳಮರ್ವ ಕಾಸರಗೋಡು.**

Scan For Digital Colourful
HAMPI TIMES E-paper

ಅಂಗಳದಲ್ಲಿಯೂ ಕೂಡ ಗುಡಿಸಿ, ಅಂಗಳದಲ್ಲಿ ಅಲ್ಲಲ್ಲಿ ನೀರು ನಿಲ್ಲದಂತೆ ಜಾಗ್ರತೆ ವಹಿಸಬೇಕಾಗುತ್ತದೆ. ನೀರು ನಿಂತರೆ ಸೊಳ್ಳೆಗಳು ಸಂತಾನೋತ್ಪತ್ತಿ ಮಾಡಿ ಅನೇಕ ರೋಗಗಳನ್ನು ತರುವ ಸಾಧ್ಯತೆಗಳು ಇರುತ್ತವೆ. ಹಾಗಾಗಿ ಮನೆಯ ಸುತ್ತ ಮುತ್ತಲೂ ನೀರು ನಿಲ್ಲದಂತೆ ಜಾಗ್ರತೆ ವಹಿಸುವುದು ಗೃಹಿಣಿಯ ಕರ್ತವ್ಯವಾಗಿದೆ.

ಬಾವಿ ನೀರಿಗೆ ಅಥವಾ ನೀರು ಸಂಗ್ರಹಿಸುವ ಕಡೆಗಳಲ್ಲಿ ನೀರಿಗೆ ಮೀನುಗಳನ್ನು ಬಿಟ್ಟರೆ, ಮೀನು ಅನೇಕ ಕ್ರಿಮಿ ಕೀಟಗಳನ್ನು, ಸೊಳ್ಳೆಯ ಮೊಟ್ಟೆಗಳನ್ನು ತಿನ್ನುವುದರಿಂದ ಅನೇಕ ರೋಗಗಳಿಂದ ದೂರವಿರಬಹುದಾಗಿದೆ.

ಹಳ್ಳಿ ಮನೆಗಳಲ್ಲಿ ಅಂಗಳದಲ್ಲಿ ಸೆಗಣಿ ಹಾಕಿ ಗುಡಿಸುವುದನ್ನು ನೋಡಿರುತ್ತೇವೆ ಹೀಗೆ ಮಾಡುವುದರಿಂದ ಅನೇಕ ಬ್ಯಾಕ್ಟೀರಿಯಾ, ಕ್ರಿಮಿ ಕೀಟಗಳಿಂದ ರಕ್ಷಿಸಿಕೊಳ್ಳಬಹುದಾಗಿದೆ.

ಹಿಂದೆಲ್ಲಾ ಹಳ್ಳಿ ಮನೆಗಳಲ್ಲಿ ಒಲೆಯಲ್ಲಿನ ಬೂದಿಯನ್ನು ಹಾಕಿ ಪಾತ್ರೆಗಳನ್ನು ತೊಳೆಯುತ್ತಿದ್ದರು ಹಾಗೂ ಉಂಡ ಎಂಜಲಿಗೆ ಸೆಗಣಿ ನೀರನ್ನು ಸಿಂಪಡಿಸಿ ಒರೆಸುತ್ತಿದ್ದರು ಹೀಗೆ ಮಾಡುವುದರಿಂದ ಕ್ರಿಮಿ ಕೀಟಗಳಿಂದ ರಕ್ಷಿಸಿಕೊಳ್ಳಬಹುದು ಹಾಗೂ ನೈರ್ಮಲ್ಯದ ದೃಷ್ಟಿಯಿಂದಲೂ ಉತ್ತಮ. ಹಳೆ ಪಾತ್ರೆ, ಹಳೆ ಪೇಪರ್ ಗಳನ್ನು ಇಟ್ಟುಕೊಂಡರೆ ಬ್ಯಾಕ್ಟೀರಿಯಾ ಗಳಿಂದ ಸೋಂಕು ತಗುಲಿ ರೋಗ ಬರುವ ಸಾಧ್ಯತೆಗಳು ಹೆಚ್ಚಿರುತ್ತವೆ ಹಾಗಾಗಿ ಅವುಗಳನ್ನು ಇಟ್ಟುಕೊಳ್ಳದೆ ಆದಷ್ಟು ಬೇಗ ವಿಲೇವಾರಿ ಮಾಡುವುದು ಒಳಿತು.

ಪ್ಲಾಸ್ಟಿಕ್ ಗಳನ್ನು ಎಲ್ಲೆಂದರಲ್ಲಿ ಬಿಸಾಡದೆ ಒಂದೇ ಕಡೆ ಶೇಖರಿಸಿಟ್ಟು ಬೆಂಕಿ ಹಾಕಿ ಚೆನ್ನಾಗಿ ಉರಿಸಿದರೆ ಆರೋಗ್ಯದ ದೃಷ್ಟಿಯಿಂದ ಉತ್ತಮ. ಗೃಹಿಣಿಗೆ ಅಡುಗೆ ಮನೆ ಎಂದರೆ ಅರಮನೆಯಿದ್ದಂತೆ ಹಾಗಾಗಿ ಅಡುಗೆ ಮನೆಯೊಳಗೆ ಸ್ವಚ್ಛವಾಗಿ ಇಟ್ಟುಕೊಂಡು, ಸತ್ವಯುತವಾದ ಸಾತ್ವಿಕ ಆಹಾರಗಳನ್ನು ಸೇವಿಸುವುದರಿಂದ ನಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು.

ದವಸ ಧಾನ್ಯಗಳನ್ನು, ಬೇಳೆ ಕಾಳುಗಳನ್ನು, ಕುರುಕಳುಗಳು, ಹಪ್ಪಳ ಮುಂತಾದವುಗಳನ್ನು ಗಾಳಿಯಾಡದಂತೆ ಬಿಗಿಯಾಗಿ ಕಟ್ಟಿಟ್ಟು ಸಂಗ್ರಹಿಸಿ ಇಡುವುದರಿಂದ ಬಹಳ ಕಾಲಗಳವರೆಗೆ ಕ್ರಿಮಿ ಕೀಟಗಳು ಬಾರದಂತೆ ಶೇಖರಿಸಿ ಇಡಬಹದು.

ತರಕಾರಿ, ಹಣ್ಣುಗಳು ಬಹು ಕಾಲ ಬಾಳಿಕೆ ಬರುವಂತೆ, ಅವುಗಳಿಗೆ ರಾಸಾನಿಕಗಳನ್ನು ಸಿಂಪಡಿಸಿ, ವಿಷಪೂರಿತಾವಾಗಿರುತ್ತವೆ ಇವುಗಳನ್ನು ಸರಿಯಾಗಿ ತೊಳೆಯದೆ ತಿಂದರೆ ವಾಂತಿ ಬೇಧಿಯಾಗುವ ಸಾಧ್ಯತೆಗಳು ಇರುತ್ತವೆ ಹಾಗಾಗಿ ಹಣ್ಣು, ತರಕಾರಿಗಳನ್ನು ಸ್ವಚ್ಛ ನೀರಿನಲ್ಲಿ ಸ್ವಲ್ಪ ಉಪ್ಪು ಸೇರಿಸಿ ಹಲವು ಬಾರಿ ಚೆನ್ನಾಗಿ ತೊಳೆದು ಉಪಯೋಗಿಸಿದರೆ ಆರೋಗ್ಯದ ದೃಷ್ಟಿಯಿಂದ ತುಂಬಾ ಉತ್ತಮ.

ದವಸ ಧಾನ್ಯಗಳು, ಅಕ್ಕಿ, ಬೇಳೆಗಳಲ್ಲಿ ಕಸ, ಕಡ್ಡಿ, ಕಲ್ಲು, ಮಣ್ಣು ಹೀಗೆ ಅನೇಕ ಕಲಬೆರಕೆಗಳಿರುತ್ತವೆ ಹಾಗಾಗಿ ಇವುಗಳನ್ನು ಚೆನ್ನಾಗಿ ತೊಳೆದು ಉಪಯೋಗಿಸಬೇಕಾಗುತ್ತದೆ.

ಕೆಲವು ಆಹಾರ ಸಮಾಗ್ರಿಗಳಿಗೆ ಬಲು ಬೇಗ ಬೂಸ್ಟ್ ಬರುತ್ತವೆ ಹಾಗಾಗಿ ಅವುಗಳನ್ನು ಚೆನ್ನಾಗಿ ಬಿಸಿಲಿನಲ್ಲಿ ಒಣಗಿಸಿ ಉಪಯೋಗಿಸುವುದು ಉತ್ತಮ.ಮನೆಯಲ್ಲಿ ಎಣ್ಣೆ ಅಥವಾ ತುಪ್ಪ ಚೆಲ್ಲಿದ್ದರೆ ಸ್ವಲ್ಪ ಕಡ್ಲೆ ಹುಡಿಯನ್ನು ಬಳಸಿ ಒರೆಸುವುದರಿಂದ ಪ್ರಯೋಜನಕಾರಿ.

ಹೀಗೆ ಒಂದೇ ಎರಡೇ?!, ಗೃಹಿಣಿಯಾದವಳು ಅದೆಷ್ಟೇ ಕಷ್ಟವಾದರೂ ಕೂಡ ಅನೇಕ ಕೆಲಸಗಳನ್ನು ತಾಳ್ಮೆಯಿಂದ, ಇಷ್ಟದಿಂದ ತನ್ನ ದಿನನಿತ್ಯದ ಕೆಲಸಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಾಳೆ ಹಾಗೂ ಮನೆ ಮಂದಿಯ ಸ್ವಚ್ಛತೆ ಹಾಗೂ ನೈರ್ಮಲ್ಯದ ಕಡೆಗೆ ಅಗತ್ಯ ಗಮನವನ್ನು ಹರಿಸುತ್ತಾಳೆ. ಕುಟುಂಬದ ಸದಸ್ಯರು ಮೊಬೈಲ್ ನೋಡುವ ಸಮಯದ ಒಂದು ಭಾಗದದಷ್ಟು ಮನೆ ಮಹಿಳೆಯ ಶ್ರಮದತ್ತ ಸಮಯಕೊಟ್ಟು ಕಣ್ಣಾಯಿಸಿ, ಮುತ್ತಿನಂಥ ಮಾತಾಡಿದರೆ ಮನೆಯೇ ನಂದನವಾಗಲಿದೆ.

# ದ್ವೇಷ ಬಿಡಿ ಪ್ರೀತಿ ಕೊಡಿ

**ಜಯಶ್ರೀ. ಎಂ. ಕರ್ಜಗಿ. ಹುಬ್ಬಳ್ಳಿ**



ಯಾವ ತಾಯಿಗೂ ತನ್ನ ಮಕ್ಕಳ ಸಂಸಾರ ಹಾಳು ಮಾಡುವ ಬಯಕೆ ಇರುವುದಿಲ್ಲ. ನಿತ್ಯದ ಬದುಕಿನಲ್ಲಿ ಅನೇಕ ತಾಪತ್ರಯಗಳು ಬರುವುದು ಸಹಜ. ಆದರೆ ಅದೆಲ್ಲವನ್ನೂ ನಿಭಾಯಿಸುವ ಕುಶಲತೆಯನ್ನು ತಾಯಿ ತನ್ನ ಮಕ್ಕಳಿಗೆ ಅದರಲ್ಲೂ ಮಗಳಿಗೆ ಧಾರೆ ಎರೆಯುತ್ತಾಳೆ. ಇಂತಹ ಕೌಟುಂಬಿಕ ವಿಚಾರಗಳು ಗಂಡನ ಅರಿವಿಗೆ ಬರುವುದೇ ಇಲ್ಲ. ಬೆಳಿಗ್ಗೆ ಕೆಲಸಕ್ಕೆ ಹೋಗಿ ಸಂಜೆ ಬರುವ ಗಂಡನಿಗೆ ಮನೆಯಲ್ಲಿ ಏನಾಗಿದೆ ಎನ್ನುವ ಪರಿಜ್ಞಾನ ಕೂಡ ಇರಲ್ಲ. ಸ್ವಾರ್ಥ ತುಂಬಿದ ಜಗತ್ತಿನಲ್ಲಿ ಯಾರು ನಮ್ಮವರು ಎಂಬುದೇ ತಿಳಿಯದಾಗಿದೆ.

ನಮ್ಮ ಜೊತೆಯೇ ಇದ್ದು, ಅಗತ್ಯಕ್ಕೆ ಮಾತ್ರ ನಮ್ಮನ್ನು ಇಷ್ಟಪಡುವ ನಾಟಕ ಮಾಡುವರು. ಅವಶ್ಯಕತೆ ಇದ್ದರೂ, ಇಲ್ಲದಿದ್ದರೂ ಯಾವಾಗಲೂ ಒಂದೇ ತರಹ ಇರಬೇಕು. ಬಣ್ಣದ ಮಾತುಗಳಿಂದ ಕೂಡಿದ ಸಂಬಂಧಗಳು ಶಾಶ್ವತವಲ್ಲ. ನಮ್ಮ ಜೀವನವೂ ಕೂಡಾ ಶಾಶ್ವತ ಅಲ್ಲ. ಇನ್ನು ಇಂತಹ ಸಂಬಂಧಗಳು ಇದ್ದರೆಷ್ಟು? ಬಿಟ್ಟರೆಷ್ಟು? ಅರ್ಥವಿಲ್ಲದ ಮಾತಿಗೆ ಎಷ್ಟೇ ಸಮಯ ನೀಡಿದರೂ ವ್ಯರ್ಥ. ಅದನ್ನು ಅರ್ಥ ಮಾಡಿಸುವ ಅಗತ್ಯವೂ ಇಲ್ಲ. ಕೆಲವೊಮ್ಮೆ ಸಮಯವೇ ಅರ್ಥ ಮಾಡಿಸುತ್ತದೆ. ನಮ್ಮವರು ಅಂತ ಅಂದುಕೊಂಡವರೆಲ್ಲ ಯಾವಾಗಲೂ ನಮ್ಮ ಜೊತೆ ಇರುತ್ತಾರೆ ಎನ್ನುವುದು ನಮ್ಮ ಭ್ರಮೆ. ಜೀವನ ಎಲ್ಲಾ ರೀತಿಯ ಪಾಠ ಕಲಿಸುತ್ತೆ.

ಮೊದಮೊದಲು ಯಾರನ್ನು ನಂಬಬೇಕು, ಯಾರನ್ನು ನಂಬಬಾರದು ಅನ್ನೊದು ಗೊತ್ತಾಗಲ್ಲ. ಆದರೆ ಸಮಯವೇ ಎಲ್ಲವನ್ನು ಕಲಿಸುತ್ತದೆ. ಸಮಯವೇ ಎಲ್ಲವನ್ನೂ ತಿಳಿಸುತ್ತದೆ. ಯಾವ ಜಾಗಕ್ಕೆ ಹೋದರೂ, ಯಾರ ಜೊತೆ ಇದ್ದರೂ ನಾವು ನಾವಾಗಿಯೇ ಇರಬೇಕು. ಕಡ್ಡಿಪೆಟ್ಟಿಗೆಯಲ್ಲಿನ ಕಡ್ಡಿಗಳು ಒಂದೇ ತರಹ ಇರುತ್ತವೆ. ಕೆಲವು ಕಡ್ಡಿಗಳು ಮನೆಯನ್ನು ಬೆಳಗುತ್ತವೆ, ಅದೇ ಇನ್ನು ಕೆಲವು ಕಡ್ಡಿಗಳು ಮನೆಯನ್ನು ಸುಡುತ್ತವೆ. ಮನುಷ್ಯರು ಕೂಡಾ ಹಾಗೆಯೇ. ಕೆಲವರು ದೇವರ ರೂಪದಂತೆ ಒಳ್ಳೆಯವರಾಗಿರುತ್ತಾರೆ, ಇನ್ನು ಕೆಲವರು ಬೇರೆಯವರ ಜೀವನವನ್ನು ಹಾಳು ಮಾಡುವಂತಹ ರಾಕ್ಷಸರಾಗಿರುತ್ತಾರೆ.

ಅವಮಾನಗಳು ಬದುಕಬೇಕು ಎಂದು ಧೈರ್ಯ ಕೊಡುತ್ತವೆ. ಒಂದು ದಿನದ ಸಾವಿಗೆ ಜೀವನ ಪೂರ್ತಿ ಬದುಕಬೇಕು. ಒಲಿದು ಬಂದ ಬದುಕನ್ನು ಸಂತೋಷದಿಂದ ಬದುಕಿಬಿಡಿ. ಯಾಕೆಂದರೆ ಇನ್ನೊಂದು ಜನ್ಮ ಇದೆಯೋ? ಇಲ್ಲವೋ? ಯಾರಿಗೆ ಗೊತ್ತು? ಯಾರನ್ನೂ ದ್ವೇಷಿಸದೇ ಎಲ್ಲರಲ್ಲಿಯೂ ಪ್ರೀತಿ ಕಂಡುಕೊಂಡು ಬಿಡಿ.

# ಪ್ರತಿಭೆ ಗುರುತಿಸಲು ಸ್ಪರ್ಧೆಗಳಲ್ಲಿ ಭಾಗವಹಿಸಲಿ



**■ ಹಂಪಿ ಟೈಮ್ಸ್ ಬಳ್ಳಾರಿ**

ಮಕ್ಕಳಲ್ಲಿನ ಅನೇಕ ರೀತಿಯ ಪ್ರತಿಭೆಗಳನ್ನು ಗುರುತಿಸಲು ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಬೇಕು ಎಂದು ಸರ್ಕಾರಿ ಕನ್ನಡ ಮಾಧ್ಯಮ ಮಾದರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯಪಾಧ್ಯಾಯರಾದ ಲೀಮ ರೋಸ್ ಹೇಳಿದರು.

ರಾಜ್ಯ ಬಾಲಭವನ ಸೊಸೈಟಿ (ರಿ) ಬೆಂಗಳೂರು, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಾಲಾ ಶಿಕ್ಷಣ ಇಲಾಖೆ, ಜಿಲ್ಲಾ ಬಾಲಭವನ ಸೊಸೈಟಿ ಇವರ ಸಹಯೋಗದಲ್ಲಿ ನಗರದ ಪಾರ್ವತಿ ನಗರ ಬಡಾವಣೆಯ ಸರಕಾರಿ ಕನ್ನಡ ಮಾಧ್ಯಮ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಯಲ್ಲಿ 05 ರಿಂದ 16 ವರ್ಷದೊಳಗಿನ ಮಕ್ಕಳಿಗೆ ಗುರುವಾರ ಏರ್ಪಡಿಸಿದ್ದ ಚಿತ್ರಕಲೆ ಸ್ಪರ್ಧೆಗೆ ಚಾಲನೆ ನೀಡಿ ಮಾತನಾಡಿದರು. ಮಕ್ಕಳಿಗೆ ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆ ಗಳಲ್ಲಿಯೂ ಎಲ್ಲಾ ಮಕ್ಕಳು ಹೆಚ್ಚಾಗಿ ಭಾಗವಹಿಸಲು ಆಸಕ್ತಿ ವಹಿಸಬೇಕು ಎಂದು ಕಿವಿಮಾತು ಹೇಳಿದರು.

ಶಿಕ್ಷಕಿ ಶ್ವೇತಾ ಹೆಚ್.ಎಂ ಅವರು ಮಾತನಾಡಿ, ಮಕ್ಕಳಿಗೆ ವಿವಿಧ ಕಲೆಗಳಲ್ಲಿ ಪ್ರತಿಭೆಯಿದ್ದು, ಅದನ್ನು ಸೂಕ್ತ ರೀತಿಯಲ್ಲಿ ಹೊರ ತರುವಲ್ಲಿ ಇಂತಹ ಸ್ಪರ್ಧೆಯಲ್ಲಿ ಭಾಗವಹಿಸಿದಾಗ ಮಾತ್ರ ತಮ್ಮಲ್ಲಿರುವ ಹೊಸ ಪ್ರತಿಭೆ ಹೊರ ಹೊಮ್ಮಲು ಸಾಧ್ಯ ಎಂದು ಹೇಳಿದರು.

ಚಿತ್ರಕಲೆ ಸ್ಪರ್ಧೆಯಲ್ಲಿ 65 ಮಕ್ಕಳು ಭಾಗವಹಿಸಿದ್ದರು. ವಿಜೇತರಾದ ಮಕ್ಕಳಿಗೆ ಪ್ರಮಾಣ ಪತ್ರ ಹಾಗೂ ಬಹುಮಾನ ವಿತರಿಸಲಾಯಿತು.

ಈ ಸಂದರ್ಭದಲ್ಲಿ ಶಿಕ್ಷಕರಾದ ವೀಣಾಕುಟ್ಟಿ.ಎಂ., ಶಶಿರೇಖಾ, ಶರ್ಮಿಳಾ.ಯು., ಜಿಲ್ಲಾ ಬಾಲಭವನ ಸೊಸೈಟಿಯ ಕಚೇರಿ ಸಹಾಯಕ ಜೀರ್ ಮಲ್ಲಿಕಾರ್ಜುನ, ಜಿಲ್ಲಾ ಮಹಿಳಾ ಸಬಲೀಕರಣ ಘಟಕದ ಕಾರ್ಯಕ್ರಮ ಸಂಯೋಜಕ ಷಹಜಹಾನ್.ಟಿ ಸೇರಿದಂತೆ ಸಿಬ್ಬಂದಿ ವರ್ಗ ಮತ್ತು ಶಾಲಾ ಮಕ್ಕಳು ಭಾಗವಹಿಸಿದ್ದರು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No. 15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಪುಲ್ವಾಮ ದಾಳಿ

ಹೆತ್ತವರಿಗೆ ಮಗನಾಗಿ,
ಮನೆಗೆ ಕಳಸವಾಗುವ.
ಮನೆ ಬೆಳಗಲೆಂದೇ ಸೇರಿದ
ಸೈನಿಕ ಕಾಯಕವ.
ದೇಶಕ್ಕಾಗಿ ಕಾವಾಲುಗರನಾಗಿ,
ನಾಡಿಗೆ ಕೀರುತಿಯ ತರುವವ.
ದೇಶ ಕಾಯಲೆಂದೇ ಆಯ್ಕೆ
ಮಾಡಿಕೊಂಡ, ಯೋಧನ ಕಾಯಕವ.
ಬನ್ನಿ ಈ ಯೋಧರಿಗೆ ಎಲ್ಲರೂ
ಕೈಯೆತ್ತಿ ಮುಗಿಯುವ...

ಯಾರೋ ಬಿಟ್ಟು ಹೋದ
ಆಚರಣೆಗಳ,
ನಿದ್ದೆಗೆಟ್ಟು ಆಚರಿಸುವೆವು ನಾವು.
ನಮಗಾಗಿ ನಿದ್ದೆ ಬಿಟ್ಟು,
ಕಾಯುವರು ಹಗಲಿರುಳ.
ಅವರಿಗಾಗಿ ಒಂದು ದಿನ
ಆಚರಿಸದೆ ಹೋಗುವೆವು ನಾವು.
ಬಂದೇ ಬಿಟ್ಟಿತು
ಪುಲ್ವಾಮ ದಾಳಿ,
ಅಂದೇ ಶುರು ಪ್ರೇಮ
ದಿನದ ಹಾವಳಿ.
ನಡೆದೇ ಹೋಯಿತು ಅದೆಷ್ಟೋ
ಹೆಣ್ಣು ಮಕ್ಕಳ ಕೊರಳಲ್ಲಿನ
ಕರಿಮಣಿಗಳ ರಕ್ತದೋಕುಳಿ.
ಸಾವಿರಾರು ಸೈನಿಕರನ್ನ
ಎತ್ತೊಯ್ಯಿತು ಆ ಸುಂಟರಗಾಳಿ...

ಬಿಟ್ಟಾಕಿ ನಮ್ಮದಲ್ಲದ
ಆಚರಣೆ –ಪದ್ಧತಿಗಳ.
ಸಲ್ಲಿಸಿ ವೀರ ಮರಣ ಹೊಂದಿದ
ಯೋಧರಿಗೆ
ನಮನಗಳ.
ಮತ್ತೆಂದೂ ಬಾರದಿರಲಿ
ಆ ದಿನದ ಕರಾಳ.. ..

– ಡಿ.ಶಶಿಕಲಾ ನಾಗಭೂಷಣ್.
ಶಿಕ್ಷಕಿ.. ಹರಪನಹಳ್ಳಿ..

### ಕರಾಳ ದಿನ

ಭಾರತೀಯರಿಗಿಂದು ದುಃಸ್ವಪ್ನವಾದ
ಕಪ್ಪುದಿನ
ಧೀರ ಸೇನಾನಿಗಳು ಅಮರರಾದ ಕರಾಳ
ದಿನ.

ಆತ್ಮಾಹುತಿ ಬಾಂಬರ್ ಹಂತಕನೊಬ್ಬ
ದುಷ್ಕೃತ್ಯಕ್ಕೆ
ಬಲಿಯಾದವರು ನಮ್ಮ 40 ಮಂದಿ
ವೀರಯೋಧರು.

ಮಗ–ಅಣ್ಣ–ತಮ್ಮ–ಅಪ್ಪನ ಆಗಮನಕ್ಕೆಂದು
ಕಾದಿದ್ದ ಕಂಗಳಿಗೆ ಕಂಬನಿಯೊಂದೇ

ಉಗ್ರಗಾಮಿಗಳ ಸಂಚಿಗೆ ಬಲಿಯಾದ ಮುಗ್ದ
ಯೋಧರು
ರಾಷ್ಟ್ರೀಯ ಹೆದ್ದಾರಿಯಲ್ಲಿ ಅಂಟಿದ್ದು ಮಾತ್ರ
ಸೈನಿಕರ ನೆತ್ತರು

ಹರಿಯಿತಂದು ರಕ್ತದ ಕೋಡಿ ಮಾಂಸದ
ತುಣುಕುಗಳಲ್ಲಿ ಹುಡುಕುವುದೇ
ಕಷ್ಟವಾಯಿತಂದು ಹುತಾತ್ಮರ ದೇಹಗಳನ್ನು
ಅಲ್ಲಿ

ಹೋರಾಡುವುದಾದರೆ ಹೋರಾಡಿ
ಧೀರತ್ವದಿಂದ ಆತ್ಮಾಹುತಿಯಲಡಗಿ
ಸಾಬೀತಾದಿರಿ ಹೇಡಿತನದಿಂದ

ಇದು ನಿಮ್ಮ ಗೆಲುವಲ್ಲ
ಹುತಾತ್ಮರಾಗಿ ಅಮರರಾದ
ನಮ್ಮ ವೀರ ಯೋಧರ ಗೆಲುವು
ದೇಶಕಾಗಿ ಪ್ರಾಣಕೊಟ್ಟ
ಹೆಮ್ಮೆಯ ಸೈನಿಕರ ಗೆಲುವು
ಭಾರತಮ್ಮನ ಅಪ್ಪುಗೆಯ ಮಡಿಲ ಸೇರಿದ
ಧೀಮಂತ ಪುತ್ರರ ಗೆಲುವು

ಜೈ ಭಾರತಾಂಬೆ

– ಸಿಂಧು ಗುಬ್ಬಿ
ಸಹಶಿಕ್ಷಕಿ. ಗುಬ್ಬಿ ತಾಲ್ಲೂಕು, ತುಮಕೂರು

ಮೈಮೇಲೆ ಹರಿದ ಬಟ್ಟೆ ಇದ್ದರೂ
ಚಿಂತೆಯಿಲ್ಲ, ಕೈಯಲ್ಲೊಂದು
ಕನ್ನಡ ದಿನಪತ್ರಿಕೆ ಇರಲಿ
ಡಿ.ವಿ.ಜಿ.

ಪ್ರಗತಿ ಪರಿಶೀಲನಾ ಸಭೆಯಲ್ಲಿ ರಾಜ್ಯ ಆಯುಕ್ತ ದಾಸ್ ಸೂರ್ಯವಂಶಿ ಹೇಳಿಕೆ

# ಅಂಗವಿಕಲರ ಸ್ನೇಹಿಯಾಗಿ ಅಧಿಕಾರಿಗಳು ಕಾರ್ಯನಿರ್ವಹಿಸಲಿ




■ ಹಂಪಿ ಟೈಮ್ಸ್ ಹೊಸಪೇಟೆ

ಅಂಗವಿಕಲ ವಿದ್ಯಾರ್ಥಿಗಳಿಗೆ ರಾಜ್ಯದ ಎಲ್ಲಾ ವಸತಿ ಶಾಲೆಗಳಲ್ಲಿ ಪ್ರವೇಶ ಪರೀಕ್ಷೆಗಳಿಲ್ಲದೇ ನೇರವಾಗಿ ಪ್ರವೇಶ ಕಲ್ಪಿಸಿ ಪಿಯುಸಿವರೆಗೆ ಉಚಿತ ಶಿಕ್ಷಣದ ಅವಕಾಶವನ್ನು ರಾಜ್ಯ ಸರ್ಕಾರ ನೀಡಿರುವುದು ದೇಶಕ್ಕೆ ಮಾದರಿಯಾಗಿದೆ ಎಂದು ಅಂಗವಿಕಲರ ಅಧಿನಿಯಮ ಅನುಷ್ಠಾನ ರಾಜ್ಯ ಆಯುಕ್ತ ದಾಸ್ ಸೂರ್ಯವಂಶಿ ಹೇಳಿದರು.

ನಗರದ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಏರ್ಪಡಿಸಿದ್ದ ಅಂಗವಿಕಲ ವ್ಯಕ್ತಿಗಳ ಅಧಿನಿಯಮ 2016 ರ ಅನುಷ್ಠಾನದ ಪ್ರಗತಿ ಪರಿಶೀಲನೆ ಸಭೆಯಲ್ಲಿ ಭಾಗವಹಿಸಿ ಅವರು ಬುಧವಾರ ಮಾತನಾಡಿದರು. ರಾಜ್ಯ ಸರ್ಕಾರ ಅಧೀನದಲ್ಲಿರುವ ಸುಮಾರು 900 ವಸತಿ ಶಾಲೆಗಳಲ್ಲಿ ಶೇ.25 ಪ್ರತಿಶತ ಅಂಗವಿಕಲತೆ ಹೊಂದಿದ ಮಕ್ಕಳಿಗೆ ಯಾವುದೇ ಪ್ರವೇಶಾತಿ ಪರೀಕ್ಷೆಗಳಿಲ್ಲದೇ 12ನೇ ತರಗತಿವರೆಗೆ ಉಚಿತ ಶಿಕ್ಷಣ ನೀಡಲು ಅವಕಾಶವಿದೆ. ಶಾಲಾ ಶಿಕ್ಷಣ ಇಲಾಖೆ ಅಂಧ ಮತ್ತು ಕಿವುಡ ಮಕ್ಕಳಿಗೆ ಶಿಕ್ಷಣದಿಂದ ವಂಚಿತರಾಗದಿರಲು ಹಾಗೂ ಬ್ರೈಲ್ ಲಿಪಿ ಅಳವಡಿಸಿ ಶಿಕ್ಷಣ ನೀಡುವಲ್ಲಿ ಪ್ರಮುಖ ಪಾತ್ರ ವಹಿಸಬೇಕಿದೆ. ಬ್ರೈಲ್ ಲಿಪಿ ಕಲಿತ ಅಂಧರು ಸುಮಾರು 12 ಜನ ಐಎಎಸ್ ಅಧಿಕಾರಿಗಳಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಶಿಕ್ಷಣ ಪಡೆಯುವ ಮೀಸಲಾತಿ ಜೊತೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ನೇಮಕಾತಿಯಲ್ಲಿ ಅಂಗವಿಕಲರಿಗಾಗಿಯೇ ಇರುವ ಶೇ.4 ರಿಂದ 5 ರಷ್ಟು ಮೀಸಲಾತಿ ಇದ್ದು, ಅದರ ಪರಿಶೀಲನೆಗಾಗಿ ವಿವಿಧ ಜಿಲ್ಲೆಗಳಲ್ಲಿ ಪ್ರವಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ–2016 ಅನುಷ್ಠಾನಗೊಳಿಸುವಲ್ಲಿ ವಿವಿಧ ಇಲಾಖೆಯ ಜಿಲ್ಲಾಮಟ್ಟದ ಅಧಿಕಾರಿಗಳು ಪ್ರಾಮಾಣಿಕತೆಯಿಂದ ಸೇವೆ ನೀಡಬೇಕಿದೆ. ವಿಕಲಚೇತನರಿಗೆ ಯಾವುದೇ ಅಭಿವೃದ್ಧಿ ಯೋಜನೆಗಳಲ್ಲಿ ವಂಚಿತರಾಗದಂತೆ ಕಡ್ಡಾಯವಾಗಿ ಶೇ.5 ರಷ್ಟು ಮೀಸಲು ನಿಗದಿಪಡಿಸಿ ಫಲಾನುಭವಿಗಳನ್ನಾಗಿಸಬೇಕು. ಸರ್ಕಾರದ ಎಲ್ಲಾ ಕಚೇರಿಗಳಲ್ಲಿ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ವಿಕಲಚೇತನರ ಸ್ನೇಹಿ ವಾತಾವಾರಣ ಸೃಷ್ಟಿಸಬೇಕಿದೆ. ಆಯಾ ಸ್ಥಳಗಳಲ್ಲಿ ಅಂಗವಿಕಲರ ಓಡಾಟಕ್ಕೆ ಸುಲಭ ದಾರಿ, ವ್ಹೀಲ್‌ಚೇರ್ ವ್ಯವಸ್ಥೆ, ಶೌಚಾಲಯ ಸೇರಿ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು. ದೇಶದಲ್ಲಿ ಮೊಟ್ಟಮೊದಲ ಬಾರಿಗೆ ಕರ್ನಾಟಕದಲ್ಲಿ ವಿಶೇಷ ಚೇತನರ ಆರೈಕೆದಾರರರಿಗೆ ಮಾಸಾಶನ ನೀಡಲು ಕ್ರಮ ವಹಿಸಲಾಗಿದ್ದು, ಇದೇ ಏಪ್ರಿಲ್ ಮಾಹೆಯಿಂದ ಆರಂಭಿಸಲು ಚಿಂತನೆ ನಡೆಸಲಾಗಿದೆ. ಇದರಿಂದ ಅಂಗವಿಕಲರ ಆರೈಕೆ ಮಾಡುವ ಪಾಲಕರಿಗೆ ಪ್ರೋತ್ಸಾಹ ನೀಡಿದಂತಾಗಲಿದೆ. ವಿವಿಧ ಯೋಜನೆಗಳ ಫಲಾನುಭವಿಗಳ ಆಯ್ಕೆಗೆ ನಿಗಧಿತ ಯ್ಯಾಪ್‌ಗಳನ್ನು ರಚಿಸಲಾಗಿದ್ದು, ಯ್ಯಾಪ್ ಮೂಲಕ ಸಮಗ್ರ ಮಾಹಿತಿಯನ್ನು ಪಡೆಯಬಹುದಾಗಿದೆ. ವಿಜಯನಗರ ಜಿಲ್ಲೆಯಲ್ಲಿ ಅಂಗವಿಕಲರಿಗೆ ಅಗತ್ಯ ಸೌಕರ್ಯಗಳನ್ನು ಕಲ್ಪಿಸಿರುವ ಹಿನ್ನಲೆಯಲ್ಲಿ ಇಡೀ ರಾಜ್ಯಕ್ಕೆ ವಿಜಯನಗರ ಜಿಲ್ಲೆ ಮಾದರಿಯಾಗಿದೆ. ರಾಜ್ಯದಲ್ಲಿ 7 ಸಾವಿರ ಅಂಗವಿಕಲರು ರಾಜ್ಯ ಸರ್ಕಾರದ ಸ್ಥಳೀಯ ಸಂಸ್ಥೆಗಳಲ್ಲಿ ಯುಆರ್‌ಡಬ್ಲ್ಯೂ, ಎಆರ್‌ಡಬ್ಲ್ಯೂ, ಎಂಆರ್‌ಡಬ್ಲ್ಯೂಗಳಾಗಿ ನೇಮಕ ಮಾಡಿ ಸರ್ಕಾರಿ ಸೇವೆಗಳನ್ನು ಪಡೆಯಲು ಅನುಕೂಲ ಕಲ್ಪಿಸಲಾಗಿದೆ. ದೇಶದಲ್ಲೇ ಕರ್ನಾಟಕ ರಾಜ್ಯ ಅಂಗವಿಕಲರಿಗೆ ಪುನರ್ವಸತಿ ಕಲ್ಪಿಸುವಲ್ಲಿ ಮಾದರಿಯಾಗಿದೆ. ರಾಷ್ಟ್ರೀಯ ಅಂಗವಿಕಲರ ಅಭಿವೃದ್ಧಿ ಹಣಕಾಸು ಸಂಸ್ಥೆಯ ಮೂಲಕ ಪ್ರತಿ ವರ್ಷ ರಾಜ್ಯಕ್ಕೆ ರೂ.100 ಕೋಟಿ ಅನುದಾನ ತರಬಹುದಾಗಿದ್ದು, ಅಂಗವಿಕಲರಿಗೆ 50 ಲಕ್ಷದವರೆಗೆ ಸಾಲಸೌಲಭ್ಯ ಹಾಗೂ ಇತರೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬಹುದಾಗಿದೆ. ವಿಕಲಚೇತನ ವ್ಯಕ್ತಿಗಳಿಗೆ ಅಗತ್ಯವಿರುವ ಆರೋಗ್ಯ, ಶೈಕ್ಷಣಿಕ, ಉದ್ಯೋಗ ಮತ್ತು ತರಬೇತಿ ಹಾಗೂ ಸಾಮಾಜಿಕ ಭದ್ರತೆಗಳಂತಹ ಪುನರ್ವಸತಿ ಸೇವೆಗಳನ್ನು ಕಲ್ಪಿಸುವುದರ ಮೂಲಕ ಅವರಿಗೆ ಸಮಾನ ಅವಕಾಶ ಕಲ್ಪಿಸಿ ಅವರನ್ನು ಮುಖ್ಯವಾಹಿನಿಗೆ ತರುವ ಉದ್ದೇಶದಿಂದ ಕೇಂದ್ರ ಸರ್ಕಾರವು ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ–2016ನ್ನು ಜಾರಿಗೆ ತಂದಿದ್ದು, ಈ ಅಧಿನಿಯಮವನ್ನು ಕರ್ನಾಟಕ ರಾಜ್ಯದಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಳಿಸಲು ರಾಜ್ಯ ಸರ್ಕಾರವು ಕರ್ನಾಟಕ ರಾಜ್ಯ ಅಂಗವಿಕಲ ವ್ಯಕ್ತಿಗಳ ನಿಯಮಗಳು–2019ನ್ನು ರೂಪಿಸಿದೆ. ವಿಕಲಚೇತನ ವ್ಯಕ್ತಿಗಳನ್ನು ಸಬಲೀಕರಣಗೊಳಿಸುವುದರ ಮೂಲಕ ಅವರ ಹಕ್ಕುಗಳನ್ನು ಸಂರಕ್ಷಿಸಲು ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ 2016 ರಲ್ಲಿ ಅವಕಾಶ ಕಲ್ಪಿಸಲಾಗಿದೆ ಎಂದರು.

ಈ ವೇಳೆ ಜಿ.ಪಂ ಉಪ ಕಾರ್ಯದರ್ಶಿ ಭೀಮಪ್ಪ ಲಾಳಿ, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ರಾಮಾಂಜಿನೇಯ, ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಸ್ಥಳೀಯ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುವ ಯುಆರ್‌ಡಬ್ಲ್ಯೂ, ಎಆರ್‌ಡಬ್ಲ್ಯೂ, ಎಂಆರ್‌ಡಬ್ಲ್ಯೂಗಳು ಭಾಗವಹಿಸಿದ್ದರು.



### ತುಂಗಭದ್ರಾ ನೀರಿನ ಮಟ್ಟ

ಗುರುವಾರ : 13–02–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1613.00 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 7732 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 44.482 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1587.95 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 165 ಕ್ಯುಸೆಕ್ |
| ಸಾಮರ್ಥ್ಯ | 9.401 ಟಿಎಂಸಿ |

### ನಿತ್ಯ ಪಂಚಾಂಗ

ಮಾಸ: ಮಾಘ । ಸಂವತ್ಸರ: ಕ್ರೋಧಿ

14–02–2025 – ಶುಕ್ರವಾರ

| | |
|---|---|
| ತಿಥಿ | : ದ್ವಿತೀಯ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಪೂರ್ವ, ಫಾಲ್ಗುಣಿ |
| ಯೋಗ | : ಅತಿಗಂಡ |
| ಕರಣ | : ತೈತುಲ |
| ಸೂರ್ಯೋದಯ | : 07:01:11 |
| ಸೂರ್ಯಾಸ್ತ | : 18:21:16 |
| ರಾಹು ಕಾಲ | : 11:16–12:41 |
| ಯಮಘಂಡ ಕಾಲ | : 15:31–16:56 |
| ಗುಳಿಕ ಕಾಲ | : 08:26–09:51 |

### ನೆನಪಿನ ಟಾನಿಕ್

ಒಮ್ಮೆ ಓದಿದರೂ, ಅದರ ಅರ್ಥವನ್ನು ಗ್ರಹಿಸಲು ಪುನರಾವರ್ತನೆ ಮಾಡಿ ಓದಿದ ವಿಷಯದ ಬಗ್ಗೆ ಪ್ರಶ್ನೆಗಳನ್ನು ಹಾಕಿಕೊಂಡು ಅರ್ಥೈಸಿಕೊಳ್ಳಿ

# ಮೈಲಾರದಲ್ಲಿ ಆರೋಗ್ಯ ಜಾಗೃತಿ



ಹಡಗಲಿ ತಾಲೂಕಿನ ಮೈಲಾರ ಜಾತ್ರೆಯಲ್ಲಿ ಆರೋಗ್ಯ ಇಲಾಖೆಯಿಂದ ತಾತ್ಕಾಲಿಕ ಚಿಕಿತ್ಸಾ ಕೇಂದ್ರಗಳನ್ನು ತೆರೆದು ಜನರಿಗೆ ಆರೋಗ್ಯ ಜಾಗೃತಿ ಮೂಡಿಸಲಾಯಿತು. ಜಾತ್ರಾ ನೂಡಲ್ ಅಧಿಕಾರಿ, ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿ ಡಾ.ಭಾಸ್ಕರ. ಮತ್ತು ಜಿಲ್ಲಾ ಅರೋಗ್ಯ ಶಿಕ್ಷಣಾಧಿಕಾರಿ.ಎಂ.ದೊಡಮನಿ. ಜಿಲ್ಲಾ ಅರೋಗ್ಯ ನಿರೀಕ್ಷಣಾಧಿಕಾರಿ.ಎಂ.ಧರ್ಮನಗೌಡ, ಮೇಲ್ವಿಚಾರಕ. ಹೊನ್ನೂರಪ್ಪ, ಟಿ.ಬಿ.ಸೂಪರ್ ವೈಸರ್.ಕೃಷ್ಣ. ಹಾಗೂ ಇಲಾಖೆ ಸಿಬ್ಬಂದಿ, ಸಾರ್ವಜನಿಕರು ಇದ್ದರು.

# ಸಬ್ಸಿಡಿ ಲೋನ್, ಹಣ ದ್ವಿಗುಣ ಆಸೆ ತೋರಿಸಿ 3 ಕೋಟಿ ರೂ ಪಡೆದ ಮೂವರು ಆರೋಪಿಗಳ ಬಂಧನ

■ ಹಂಪಿ ಟೈಮ್ಸ್ ಹೊಸಪೇಟೆ







ಅಮಾಯಕರಿಗೆ ಸಬ್ಸಿಡಿ ಲೋನ್ ಕೊಡಿಸುವುದು ಮತ್ತು ಹಣ ಡಬಲಿಂಗ್ ಮಾಡಿಕೊಡುವ ಆಸೆ ತೋರಿಸಿ, ಸುಮಾರು 300 ಜನರಿಂದ 3 ಕೋಟಿ ರೂ. ಹಣ ಪಡೆದು, ಅವರಿಗೆ ಹಿಂತಿರುಗಿಸದೆ, ಲೋನ್ ಕೊಡಿಸದೆ ಮೋಸ ಮಾಡಿರುವ ಆರೋಪದ ಮೇಲೆ ನಗರದ ಸಮಾಜ ಸೇವಕಿ, ಪ್ರಿಯಾಂಕ ಪತ್ತಿನ ಸಹಕಾರ ಸಂಘದ ಅಧ್ಯಕ್ಷೆ ಪ್ರಿಯಾಂಕ ಜೈನ್, ಅವರ ಸಹಕಾರಿಯ ಸಿಬ್ಬಂದಿ ಫೀಲ್ಡ್ ವರ್ಕರ್ ವೆಂಕಟೇಶಲು ವಿ.ಆರ್., ಕಾರ್ಯದರ್ಶಿ ಎಚ್.ಎಂ.ಅಂದಾನಯ್ಯ ಬಂಧಿಸಲಾಗಿದ್ದು, ಇನ್ನುಳಿದ ಆರೋಪಿಗಳಿಗೆ ಬಲೆ ಬೀಸಲಾಗಿದೆ ಎಂದು ಎಸ್ಪಿ ಬಿ.ಎಲ್.ಶ್ರೀಹರಿಬಾಬು ತಿಳಿಸಿದ್ದಾರೆ.

ಆರೋಪಿಗಳ ಬಂಧನ ಕಾರ್ಯಾಚರಣೆಯಲ್ಲಿ ಎಎಸ್‌ಪಿ ಸಲೀಮ್ ಪಾಷಾ, ಡಿವೈಎಸ್ಪಿ ಟಿ.ಮಂಜುನಾಥ, ಪಟ್ಟಣ ಠಾಣೆ ಪಿಐ ಲಖನ್ ಆರ್ ಮಸಗುಪ್ಪಿ, ಪಿಎಸ್‌ಐ ಕೆ.ರಾಜಶೇಖರ, ಹೆಡ್‌ಕಾನ್ಸ್ಟೇಬಲ್‌ಗಳಾದ ಬಿ.ರಾಘವೇಂದ್ರ, ಲಿಂಗರಾಜ, ಕೆ.ನಾಗರಾಜ, ಸಿದ್ದಪ್ಪ, ಪೊಲೀಸ್ ಕಾನ್ಸ್ಟೇಬಲ್‌ಗಳಾದ ಎ.ಕೆ.ಕೊಟ್ರೇಶ್, ಜೆ.ಪಕ್ಕೀರಪ್ಪ, ದೇವೇಂದ್ರಪ್ಪ.ಜೆ., ಬಸವರಾಜ, ಕೊಟ್ರೇಶ್, ಮಂಜುನಾಥ.ಎಲ್., ಮಹಿಳಾ ಪೊಲೀಸರಾದ ಶೋಭಾ, ಗ್ರಾಮೀಣ ಠಾಣೆಯ ಎಚ್.ಸಿ. ಕೆ.ಟಿ.ಉಮಾ, ಬಡಾವಣೆ ಠಾಣೆಯ ಹೆಚ್.ಸಿ., ಶಿಲ್ಪಾ ಪಾಲ್ಗೊಂಡಿದ್ದರು.

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ ಈಗಿಂದಲೇ ಪುನರ್‌ಮನನ ಮಾಡಿ

HAMPI TIMES MARGADARSHI

ಪರೀಕ್ಷೆಗೆ ನಾವು ಸಿದ್ಧ 35 ದಿನ

ಮನಸ್ಸು ಮಾಡು-ಕರ್ತವ್ಯ ನಿಷ್ಟನಾಗು-ಕಾದು ನೋಡು

https://epaper.hampitimes.com

ಹಂಪಿ ಟೈಮ್ಸ್ ಮಾರ್ಗದರ್ಶಿ SSLC : ವಿಜ್ಞಾನ

### ಭೌತವಿಜ್ಞಾನ [ಪುನರಾವರ್ತನೆ]

1.. ಓಮನ ನಿಯಮವನ್ನು ವ್ಯಾಖ್ಯಾನಿಸಿ? ಗಣಿತೀಯ ಸೂತ್ರ ಬರೆಯಿರಿ.

ಉ : ಒಂದು ನಿರ್ದಿಷ್ಟ ತಾಪಮಾನದಲ್ಲಿ ರೋಧಕದ ಮೂಲಕ ಹರಿಯುವ ವಿದ್ಯುತ್ ಪ್ರವಾಹವು ಅದರ ನಡುವಿನ ವಿಭವಾಂತರಕ್ಕೆ ನೇರ ಅನುಪಾತದಲ್ಲಿರುತ್ತವೆ.

ಗಣಿತೀಯ ಸೂತ್ರ: $V = IR$

2. ರೋಧ ಅವಲಂಬಿಸಿರುವ ಅಂಶಗಳು ಯಾವುವು?


ಉ : 1. ವಾಹಕದ ಉದ್ದ. 2. ವಾಹಕದ ಅಡ್ಡಕೊಯ್ತ.
3. ವಾಹಕದ ಪ್ರಾಕೃತಿಕ ಗುಣ. 4. ತಾಪ.

3. ಜೌಲನ ಉಷ್ಣೋತ್ಪಾದನಾ ನಿಯಮ ವ್ಯಾಖ್ಯಾನಿಸಿ, ಇದರ ಆಧಾರದ ಮೇಲೆ ಕಾರ್ಯನಿರ್ವಹಿಸುವ ಉಪಕರಣಗಳನ್ನು ಪಟ್ಟಿಮಾಡಿ.

ಉ : ರೋಧಕದಲ್ಲಿ ಉತ್ಪತ್ತಿಯಾದ ಉಷ್ಣವು,
i) ಕೊಟ್ಟಿರುವ ರೋಧದಲ್ಲಿ ಪ್ರವಹಿಸುತ್ತಿರುವ ವಿದ್ಯುತ್‌ಪ್ರವಾಹದ ವರ್ಗಕ್ಕೆ ನೇರಾನುಪಾತದಲ್ಲಿರುತ್ತದೆ.
ii) ಕೊಟ್ಟಿರುವ ವಿದ್ಯುತ್ ಪ್ರವಾಹಕ್ಕೆ, ರೋಧವು ನೇರ ಅನುಪಾತದಲ್ಲಿರುತ್ತದೆ
iii) ರೋಧಕಗಳ ಮೂಲಕ ಹರಿಯುವ ವಿದ್ಯುತ್‌ಪ್ರವಾಹದ ಕಾಲಕ್ಕೆ ನೇರ ಅನುಪಾತದಲ್ಲಿರುತ್ತದೆ.


ಕಾರ್ಯನಿರ್ವಹಿಸುವ ಉಪಕರಣಗಳು: ವಿದ್ಯುತ್ ಒಲೆ, ವಿದ್ಯುತ್ ಹೀಟರ್, ವಿದ್ಯುತ್ ಬಲ್ಬ್, ಫ್ಯೂಸ್.

4. ಬಲಗೈ ಹೆಬ್ಬೆರಳ ನಿಯಮ ಬರೆಯಿರಿ ?




ಉ : ಬಲಗೈಯಲ್ಲಿ ವಿದ್ಯುತ್ಪ್ರವಹಿಸುತ್ತಿರುವ ನೇರವಾದ ಒಂದು ವಾಹಕವನ್ನು ಹಿಡಿದಿರುವಿರಿ ಎಂದು ಭಾವಿಸಿದಾಗ, ಹೆಬ್ಬೆರಳು ವಿದ್ಯುತ್ಪ್ರವಾಹದ ದಿಕ್ಕನ್ನು ಸೂಚಿಸಿದರೆ, ಉಳಿದ ಬೆರಳುಗಳು ಕಾಂತಕ್ಷೇತ್ರದ ಕಾಂತೀಯ ಬಲರೇಖೆಗಳ ದಿಕ್ಕನ್ನು ಸೂಚಿಸುತ್ತವೆ.

5. ಫ್ಲೆಮಿಂಗ್ ನ ಎಡಗೈ ನಿಯಮ ಬರೆಯಿರಿ ?




ಉ : ಈ ನಿಯಮದ ಪ್ರಕಾರ ಎಡಗೈನ ಹೆಬ್ಬೆರಳು, ತೋರುಬೆರಳು ಮತ್ತು ಮಧ್ಯದ ಬೆರಳುಗಳನ್ನು ಪರಸ್ಪರ ಲಂಬವಾಗಿರುವಂತೆ ಹಿಡಿದುಕೊಂಡಾಗ,
ತೋರುಬೆರಳು ಕಾಂತಕ್ಷೇತ್ರದ ದಿಕ್ಕನ್ನು,
ಮಧ್ಯದ ಬೆರಳು ವಿದ್ಯುತ್ಪ್ರವಾಹದ ದಿಕ್ಕನ್ನು,
ಹಾಗೂ ಹೆಬ್ಬೆರಳು ವಾಹಕದ ಮೇಲೆ ವರ್ತಿಸುವ ಬಲದ ದಿಕ್ಕನ್ನು ಸೂಚಿಸುತ್ತದೆ.

6. ಬೆಳಕಿನ ಪ್ರತಿಫಲನದ ನಿಯಮಗಳನ್ನು ಬರೆಯಿರಿ ?

ಉ : ಪತನ ಕೋನವು ಪ್ರತಿಫಲನ ಕೋನಕ್ಕೆ ಯಾವಾಗಲೂ ಸಮನಾಗಿರುತ್ತದೆ.
ಪತನ ಕಿರಣ, ಪ್ರತಿಫಲಿತ ಕಿರಣ ಮತ್ತು ಪತನ ಬಿಂದುವಿನಲ್ಲಿ ಪ್ರತಿಫಲಿತ ಮೇಲ್ಮೈಗೆ ಎಳೆದ ಲಂಬ ಈ ಮೂರು ಒಂದೇ ಸಮತಲದಲ್ಲಿರುತ್ತವೆ.

7. ಬೆಳಕಿನ ವಕ್ರೀಭವನದ ನಿಯಮಗಳನ್ನು ಬರೆಯಿರಿ ?

ಉ : * ಪತನ ಕಿರಣ , ವಕ್ರಿಮ ಕಿರಣ ಮತ್ತು ಎರಡು ಮಾದ್ಯಮಗಳ ಸಂಪರ್ಕ ಮೇಲ್ಮೈಗೆ ಪತನ ಬಿಂದುವಿನಲ್ಲಿ ಎಳೆದ ಲಂಬ ಎಲ್ಲವೂ ಒಂದೇ ಸಮತಲದಲ್ಲಿರುತ್ತವೆ.
*ಕೊಟ್ಟಿರುವ ಬೆಳಕಿನ ನಿರ್ದಿಷ್ಟ ಬಣ್ಣ ಮತ್ತು ನೀಡಿರುವ ಜೋಡಿ ಮಾದ್ಯಮಗಳಿಗೆ ಪತನಕೋನದ ಸೈನು ಮತ್ತು ವಕ್ರಿಮ ಕೋನದ ಸೈನುಗಳ ನಿಷ್ಪತ್ತಿ ಸ್ಥಿರವಾಗಿರುತ್ತದೆ. ಇದನ್ನು "ಸ್ನೆಲ್ ನ ನಿಯಮ" ಎನ್ನುವರು.

$$\frac{\sin i}{\sin r} = \text{ಸ್ಥಿರಾಂಕ}$$

8. ಈ ಕೆಳಗಿನ ವಾಹಕಗಳಲ್ಲಿ ವಿದ್ಯುತ್ಪ್ರವಾಹದಿಂದ ಉಂಟಾದ ಕಾಂತೀಯ ಬಲರೇಖೆಗಳ ಗುಣಗಳನ್ನು ತಿಳಿಸಿ ?
1. ನೇರ ವಾಹಕ ತಂತಿ
2. ವೃತ್ತಾಕಾರದ ವಾಹಕ ಸುರುಳಿ
3. ಸೊಲೆನಾಯ್ಡ್

ಉ : 1. ನೇರ ವಾಹಕ ತಂತಿಯಲ್ಲಿ : ಏಕ ಕೇಂದ್ರೀಯ ವೃತ್ತಗಳ ಮಾದರಿಯಲ್ಲಿರುತ್ತವೆ.
2. ವೃತ್ತಾಕಾರದ ವಾಹಕ ಸುರುಳಿಯಲ್ಲಿ : ಸುರುಳಿಯ ಪ್ರತೀ ಬಿಂದುವಿನಲ್ಲಿ ಏಕ ಕೇಂದ್ರೀಯ ವೃತ್ತಗಳಾಗಿದ್ದು, ಸುರುಳಿಯ ಕೇಂದ್ರದಲ್ಲಿ ಸರಳರೇಖೆಯಂತಿರುತ್ತವೆ.
3. ಸೊಲೆನಾಯ್ಡ್ : ಹೊರಭಾಗದಲ್ಲಿ ದಂಡಕಾಂತದ ಸುತ್ತಲಿನ ಬಲರೇಖೆಗಳಂತಿರುತ್ತವೆ. ಒಳಭಾಗದಲ್ಲಿ ಪರಸ್ಪರ ಸಮಾಂತರವಾಗಿರುತ್ತವೆ.

9. ಕಾಂತೀಯ ಬಲರೇಖೆಗಳ ಗುಣಗಳನ್ನು ಪಟ್ಟಿಮಾಡಿ ?

ಉ : * ಕಾಂತೀಯ ಬಲರೇಖೆಗಳು ಆವೃತ ಜಾಲಗಳಾಗಿವೆ.
* ಕಾಂತೀಯ ಬಲರೇಖೆಗಳು ಉತ್ತರ ಧ್ರುವದಲ್ಲಿ ಉತ್ಸರ್ಜಿತವಾಗಿ ದಕ್ಷಿಣ ಧ್ರುವದಲ್ಲಿ ವಿಲೀನಗೊಳ್ಳುತ್ತವೆ.
* ಯಾವುದೇ ಎರಡು ಕಾಂತೀಯ ಬಲರೇಖೆಗಳು ಒಂದನ್ನೊಂದು ಛೇದಿಸುವುದಿಲ್ಲ.

10. ಗೃಹಬಳಕೆಯ ವಿದ್ಯುತ್ ಮಂಡಲಗಳಲ್ಲಿ ಸುರಕ್ಷತೆಗಾಗಿ ಬಳಸುವ ಈ ಕೆಳಗಿನವುಗಳ ಕಾರ್ಯವೇನು ?
1. ಭೂಸಂಪರ್ಕ ತಂತಿ 2. ವಿದ್ಯುತ್ ಫ್ಯೂಸ್

ಉ : 1. ಭೂ ಸಂಪರ್ಕ ತಂತಿಯ ಕಾರ್ಯ :
* ಲೋಹದ ಮೇಲ್ಮೈ ಹೊಂದಿರುವ ಉಪಕರಣಕ್ಕೆ ಯಾವುದೇ ರೀತಿಯ ವಿದ್ಯುತ್ ನ ಸೋರಿಕೆ ಉಂಟಾದಲ್ಲಿ ಅದರ ವಿಭವಾಂತರವನ್ನು ಭೂಮಿಯ ವಿಭವಾಂತರಕ್ಕೆ ಸಮನಾಗಿಸಿ ಬಳಕೆದಾರರಿಗೆ ತೀವ್ರ ವಿದ್ಯುತ್ ಅಘಾತವಾಗುವುದನ್ನು ತಪ್ಪಿಸುತ್ತದೆ.
* ವಾಹಕದಲ್ಲಿನ ಅಧಿಕ ವಿಭವಾಂತರವನ್ನು ನಿಯಂತ್ರಿಸುತ್ತದೆ.
2. ವಿದ್ಯುತ್ ಫ್ಯೂಸ್‌ನ ಕಾರ್ಯ :
* ವಿದ್ಯುತ್ ಮಂಡಲ ಮತ್ತು ವಿದ್ಯುತ್ ಉಪಕರಣಗಳಿಗೆ ಓವರ್ ಲೋಡ್ ನಿಂದ ಉಂಟಾಗುವ ಹಾನಿಯಿಂದ ರಕ್ಷಿಸುತ್ತದೆ.
* ಸರಬರಾಜಾಗುವ ವೋಲ್ಟೇಜ್(ವಿಭವಾಂತರ)ನ ಆಕಸ್ಮಿಕ ಹೆಚ್ಚಳದಿಂದಾದ ತಾಪದಿಂದ ಫ್ಯೂಸ್ ಕರಗಿ ವಿದ್ಯುತ್ ಸಂಪರ್ಕ ಕಡಿತಗೊಳ್ಳುತ್ತದೆ.

11. ಹ್ರಸ್ವಮಂಡಲ ಎಂದರೇನು ? ಹ್ರಸ್ವಮಂಡಲ (ಶಾರ್ಟ್ ಸರ್ಕ್ಯೂಟ್) /ಓವರ್ ಲೋಡ್ ಉಂಟಾಗಲು ಕಾರಣವೇನು ?

ಉ : ಸಜೀವ ತಂತಿ ಮತ್ತು ತಟಸ್ಥ ತಂತಿಗಳು ಎರಡೂ ನೇರ ಸಂಪರ್ಕಕ್ಕೆ ಬಂದಾಗ ಮಂಡಲದಲ್ಲಿನ ವಿದ್ಯುತ್‌ಪ್ರವಾಹವು ಥಟ್ಟನೆ ಬಹಳ ಹೆಚ್ಚಾಗುತ್ತದೆ. ಇದನ್ನು ಹ್ರಸ್ವಮಂಡಲ (ಶಾರ್ಟ್ ಸರ್ಕ್ಯೂಟ್) ಎನ್ನುವರು.
ಹ್ರಸ್ವಮಂಡಲ (ಶಾರ್ಟ್ ಸರ್ಕ್ಯೂಟ್)/ ಓವರ್ ಲೋಡ್ ಉಂಟಾಗಲು ಕಾರಣ :
* ಮಂಡಲದಲ್ಲಿನ ಸಜೀವ ಮತ್ತು ತಟಸ್ಥ ತಂತಿಗಳು ಸಂಪರ್ಕಗೊಂಡಾಗ,
* ವಿದ್ಯುತ್ ಉಪಕರಣಗಳಲ್ಲಿನ ದೋಷದಿಂದ,
* ಒಂದೇ ಸಾಕೆಟ್ ಗೆ ಹಲವಾರು ಉಪಕರಣಗಳನ್ನು ಏಕ ಕಾಲದಲ್ಲಿ ಬಳಸುವುದರಿಂದ,
* ಹೆಚ್ಚಿನ ಸಾಮರ್ಥ್ಯದ ಉಪಕರಣಗಳನ್ನು ಬಳಸುವುದರಿಂದ,


ಮುಂದುವರೆಯುತ್ತದೆ.........

ಮಾರ್ಗದರ್ಶಿ ಶಿಕ್ಷಕರು : ಶಿವತನಯ ಎಸ್.ಸಿ.. ವಿಜ್ಞಾನ ಶಿಕ್ಷಕರು, ಎಸ್.ಜಿ.ಬಿ.ಪ್ರೌಢಶಾಲೆ, ಬೆಣಕಲ್ಲು, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ )

ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ

ಭಾವಪೂರ್ಣ ಶ್ರದ್ಧಾಂಜಲಿ
ನಿಧನ - ಪುಣ್ಯ ಸ್ಮರಣೆ
ಜಾಹೀರಾತುಗಳಿಗೆ
ವಿಶೇಷ ರಿಯಾಯತಿ
ನಿಧನದ ಬಗ್ಗೆ ಕುಟುಂಬ, ಸ್ನೇಹಿತರು, ಮತ್ತು ಪರಿಚಿತರಿಗೆ ಶೀಘ್ರ ಮತ್ತು ಸರಿಯಾದ ಮಾಹಿತಿ ನೀಡಲು ಇದು ನೆರವಾಗುತ್ತದೆ.
ಜಾಹೀರಾತು ನೀಡಲು ಸಂಪರ್ಕಿಸಿ
ಹಂಪಿ ಟೈಮ್ಸ್
94486 33038

14 ಭಾಷೆಗಳಲ್ಲಿ
ಹಂಪಿ ಟೈಮ್ಸ್ ವೆಬ್‌ನ್ಯೂಸ್‌ಗೆ
ಭೇಟಿ ನೀಡಿ, ನಿಮ್ಮ ಮಾತೃಭಾಷೆಯಲ್ಲಿ
ಸುದ್ದಿ, ಲೇಖನ ಓದಿರಿ...
www.hampitimes.com




## ಫೆ.15 ರಂದು ಜೆಸ್ಕಾಂ ಗ್ರಾಹಕರ ಕುಂದು ಕೊರತೆ ಸಭೆ

**ಹಂಪಿ ಟೈಮ್ಸ್ ಹೊಸಪೇಟೆ**

ಕಲಬುರ್ಗಿ ಜೆಸ್ಕಾಂ ವ್ಯವಸ್ಥಾಪಕ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಫೆ.15 ರಂದು ಬೆಳಗ್ಗೆ 10 ಗಂಟೆಗೆ, ಟಿ.ಬಿ.ಡ್ಯಾಂ ರಸ್ತೆಯ ಶ್ರೀಪ್ರೌಢದೇವರಾಯ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಹೆಚ್.ಟಿ ಮತ್ತು ಇ.ಹೆಚ್.ಟಿ ಗ್ರಾಹಕರ ಕುಂದುಕೊರತೆ ಸಭೆಯನ್ನು ಆಯೋಜಿಸಲಾಗಿದೆ. ಗ್ರಾಹಕರು ಹೆಚ್ಚಿನ ಸಂಖ್ಯೆಯಲ್ಲಿ ಹೊಸಪೇಟೆ ಮತ್ತು ಹಗರಿಬೊಮ್ಮನಹಳ್ಳಿ ವ್ಯಾಪ್ತಿಯ ಹೆಚ್.ಟಿ, ಮತ್ತು ಇ.ಹೆಚ್.ಟಿ ಗ್ರಾಹಕರು ಸಭೆಯಲ್ಲಿ ಭಾಗವಹಿಸಿ ತಮ್ಮ ಕುಂದುಕೊರತೆಗಳನ್ನು ಬಗೆಹರಿಸಿಕೊಳ್ಳಬೇಕೆಂದು ಕಾರ್ಯ ಮತ್ತು ಪಾಲನಾ ನಗರ ವಿಭಾಗ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಜಾನಪದ ಲೋಕಕ್ಕೆ ನಷ್ಟ

**ಮೊದಲನೆ ಪುಟದಿಂದ**

ಇವರಿಗೆ ಕನ್ನಡ ವಿಶ್ವವಿದ್ಯಾಲಯವು 2008ರಲ್ಲಿ ನಡೆದ 16ನೇ ನುಡಿಹಬ್ಬದಲ್ಲಿ ಪ್ರತಿಷ್ಠಿತ ನಾಡೋಜ ಗೌರವ ಪದವಿಯನ್ನು ಪ್ರದಾನ ಮಾಡಿದೆ. ಸುಕ್ರಿಯವರ ನಿಧನದಿಂದ ಜಾನಪದ ಲೋಕವು ಬಡವಾಗಿದೆ. ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇನೆ ಎಂದು ಸುಕ್ರಿಯವರ ವ್ಯಕ್ತಿತ್ವವನ್ನು ಬಣ್ಣಿಸಿದರು.

ಸಂತಾಪ ಸೂಚಕ ಸಭೆಯಲ್ಲಿ ಕುಲಸಚಿವರಾದ ಡಾ.ವಿಜಯ್ ಪೂಣಚ್ಚ ತಂಬಂಡ, ಉಪಕುಲಸಚಿವ ಡಾ.ಎ.ವೆಂಕಟೇಶ, ಸಹಾಯಕ ಕುಲಸಚಿವ ಗುರುಬಸಪ್ಪ, ಸಹಾಯಕ ನಿರ್ದೇಶಕ ಎಸ್.ಕೆ. ವಿಜಯೇಂದ್ರ, ಅಧ್ಯಾಪಕರಾದ ಡಾ.ಎಲ್.ಶ್ರೀನಿವಾಸ, ಡಾ.ಮೋಹನ ಪಂಚಾಳ, ಸಿಬ್ಬಂದಿಗಳು ಪಾಲ್ಗೊಂಡಿದ್ದರು.

# ಮೈಕ್ರೋಫೈನಾನ್ಸ್ ಸಂಸ್ಥೆಗಳ ಕಿರುಕುಳ ನಿಯಂತ್ರಣಕ್ಕೆ ಸರ್ಕಾರಿ ಆಧ್ಯಾದೇಶ ಜಾರಿ

**ಹಂಪಿ ಟೈಮ್ಸ್ ಬಳ್ಳಾರಿ**

ಮಧ್ಯಮ ಹಾಗೂ ಕೆಳ ಮಧ್ಯಮ ವರ್ಗದವರು ಸಣ್ಣ ಫೈನಾನ್ಸ್ ಸಂಸ್ಥೆಗಳಲ್ಲಿ ಸಾಲ ಪಡೆದು ಮರುಪಾವತಿಸುವಲ್ಲಿ ವಿಳಂಬಮಾಡುವ ಸಾಲಗಾರರ ಮೇಲೆ ಮೈಕ್ರೋಫೈನಾನ್ಸ್ ಸಂಸ್ಥೆಗಳು, ಸಾಲ ನೀಡಿಕೆ ಏಜೆನ್ಸಿಗಳು ಹಾಗೂ ಲೇವಾದೇವಿಗಾರರು ನೀಡುವ ಕಿರುಕುಳ ಹಾಗೂ ಬಲವಂತದ ವಸೂಲಾತಿ ಕ್ರಮಗಳನ್ನು ನಿಯಂತ್ರಿಸಲು ಸರ್ಕಾರವು ಕರ್ನಾಟಕ ಕಿರು (ಮೈಕ್ರೋ) ಸಾಲ ಮತ್ತು ಸಣ್ಣ ಸಾಲ (ಬಲವಂತದ ಕ್ರಮಗಳ ಪ್ರತಿಬಂಧಕ) ಅಧ್ಯಾದೇಶ 2025ನ್ನು ಫೆಬ್ರವರಿ 12 ರಿಂದ ಜಾರಿಗೊಳಿಸಿದ್ದು, ಆದೇಶದ ಮುಖ್ಯಾಂಶಗಳು ಹೀಗಿವೆ.

ಮೈಕ್ರೋಫೈನಾನ್ಸ್ ಸಂಸ್ಥೆಗಳು ಸಾಲಗಾರರಿಂದ ಯಾವುದೇ ಭದ್ರತೆ ಪಡೆಯಬಾರದು. ಗ್ರಾಹಕರಿಗೆ ವಿಧಿಸುವ ಬಡ್ಡಿದರಗಳ ಬಗ್ಗೆ ಪಾರದರ್ಶಕವಾಗಿ ಲಿಖಿತ ರೂಪದಲ್ಲಿ ತಿಳಿಸಬೇಕು. ಈ ಆದೇಶವು ಭಾರತೀಯ ರಿಸರ್ವ್ ಬ್ಯಾಂಕ್, ಕೇಂದ್ರ ಮತ್ತು ರಾಜ್ಯ ಸರ್ಕಾರಗಳಲ್ಲಿ ನೊಂದಣಿಯಾಗದ ಮೈಕ್ರೋ ಫೈನಾನ್ಸ್ ಸಂಸ್ಥೆಗಳಿಗೆ ಮಾತ್ರ ಅನ್ವಯಿಸುತ್ತದೆ.

ನೋಂದಾಯಿತ ಸಂಸ್ಥೆಗಳಿಂದ ಅಂದಾಜು 60 ಸಾವಿರ ಕೋಟಿ ರೂ ಸಾಲವನ್ನು ಸುಮಾರು 1.09 ಕೋಟಿ ಸಾಲಗಾರರು ಪಡೆದಿದ್ದಾರೆ. ನೋಂದಣಿಯಾಗದ ಸಂಸ್ಥೆಗಳಿಂದ ಸಾಲ ಪಡೆದವರ ಮಾಹಿತಿ ನಿಖರವಾಗಿ ಲಭ್ಯವಿಲ್ಲವಾದರೂ, ಅಂದಾಜು 40 ಸಾವಿರ ಕೋಟಿ ರೂ ಸಾಲ ಪಡೆದಿದ್ದಾರೆ ಎಂಬ ಮಾಹಿತಿ ಇದೆ.



ಮೈಕ್ರೋಫೈನಾನ್ಸ್ ಸಂಸ್ಥೆಗಳು ತಾವು ವ್ಯವಹರಿಸುತ್ತಿರುವ ಜಿಲ್ಲೆಗಳ ಜಿಲ್ಲಾಧಿಕಾರಿಗಳಲ್ಲಿ ನೋಂದಣಿಯಾಗುವುದು ಕಡ್ಡಾಯವಾಗಿದೆ. ಈ ಸಂಸ್ಥೆಗಳು ವಿಧಿಸುವ ಬಡ್ಡಿದರ, ಸಾಲಗಾರರ ಮಾಹಿತಿ ಹಾಗೂ ಸುಸ್ತಿ ಸಾಲಗಳ ವಿವರಗಳನ್ನು ಜಿಲ್ಲಾಧಿಕಾರಿಗಳಿಗೆ ನೀಡಬೇಕು.

ತ್ರೈ ಮಾಸಿಕ ಮತ್ತು ವಾರ್ಷಿಕ ವ್ಯವಹಾರದ ವಿವರಗಳನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಬೇಕು. ನಿಗದಿತ ಅವಧಿಯಲ್ಲಿ ಮಾಹಿತಿಯನ್ನು ಸಲ್ಲಿಸದಿದ್ದರೆ 6 ತಿಂಗಳ ಕಾರಗೃಹವಾಸ ಅಥವಾ 10 ಸಾವರಿರೂ ವರೆಗೆ ದಂಡ ಅಥವಾ ಎರಡೂ ಶಿಕ್ಷೆಗೆ ಗುರಿಯಾಗುತ್ತಾರೆ. ವಿವಾದಗಳನ್ನು ಇತ್ಯರ್ಥಗಳನ್ನು ಒಂಬುಡ್ಸ್‌ಮನ್‌ಗಳನ್ನು ಸರ್ಕಾರ ಅಧಿಸೂಚನೆ ಮೂಲಕ ನೇಮಕ ಮಾಡುವ ಅಧಿಕಾರ ಹೊಂದಿರುತ್ತದೆ.

**ಬಾಕ್ಸ್ ಐಟಂ (ಕೋಟ್):** ಬಲವಂತದ ವಸೂಲಾತಿಗಳನ್ನು ಕೈಗೊಳ್ಳುವ ವ್ಯಕ್ತಿಯು ವಿಚಾರಣೆಗೆ ಒಳಪಡುತ್ತಾನೆ, ಹತ್ತು ವರ್ಷಗಳ ವರೆಗೆ ವಿಸ್ತರಿಸಬಹುದಾದ ಕಾರಗೃಹವಾಸ ಶಿಕ್ಷೆ ಹಾಗೂ 5 ಲಕ್ಷ ರೂ ವರೆಗೆ ವಿಧಿಸಬಹುದಾದ ಜುಲ್ಮಾನೆಗೆ ಒಳಪಡುತ್ತಾನೆ. ಈ ಅಪರಾಧಗಳು ಸಂಜ್ಞೆಯ (ಕಾಗ್ನಿಜಿಬಲ್) ಹಾಗೂ ಜಾಮೀನು ರಹಿತ (ನಾನ್ ಬೇಲೆಬಲ್) ಪ್ರಕರಣಗಳಾಗಿರುತ್ತವೆ. ಯಾವುದೇ ಪೊಲೀಸ್ ಅಧಿಕಾರಿಗಳು ಇಂತಹ ಪ್ರಕರಣಗಳನ್ನು ನೊಂದಣಿ ಮಾಡಿಕೊಳ್ಳಲು ನಿರಾಕರಿಸಬಾರದು.

ಪೊಲೀಸ್ ಉಪ ಅಧೀಕ್ಷಕ (ಡಿವೈಎಸ್ಪಿ) ದರ್ಜೆಗಿಂತ ಕಡಿಮೆ ಇಲ್ಲದ ಅಧಿಕಾರಿಯು ಸ್ವತಃ (ಸುಮೊಟೊ) ಪ್ರಕರಣ ದಾಖಲಿಸಬಹುದು. ಸರ್ಕಾರವು ಈ ಅಧ್ಯಾದೇಶದ ಅನುಷ್ಠಾನಕ್ಕೆ ಕಾಲಕಾಲಕ್ಕೆ ನಿರ್ದೇಶನಗಳನ್ನು ನೀಡುವ ಅಧಿಕಾರ ಹೊಂದಿರುತ್ತದೆ. ಈ ಆದೇಶದಿಂದ ಆರ್.ಬಿ.ಐ ಮತ್ತು ಕೇಂದ್ರ / ರಾಜ್ಯ ಸರ್ಕಾರಗಳಿಂದ ನೋಂದಣಿಯಾಗದ ಮೈಕ್ರೋ ಫೈನಾನ್ಸ್ ಸಂಸ್ಥೆಗಳಲ್ಲಿ ಆರ್ಥಿಕ ಶಿಸ್ತು ಹೆಚ್ಚಿಸಲು ಹಾಗೂ ಸಾಲಗಾರರಿಗೆ ಕಿರುಕುಳ, ಬಲವಂತದ ವಸೂಲಿ ಕ್ರಮಗಳಿಂದ ಮುಕ್ತಿ ನೀಡುತ್ತದೆ.

**– ಡಾ. ಶಾಲಿನಿ ರಜನೀಶ್**
**ಸರ್ಕಾರದ ಮುಖ್ಯ ಕಾರ್ಯದರ್ಶಿಗಳು.**

## ಫೆ.15 ರಂದು ಜೆಸ್ಕಾಂ ಗ್ರಾಹಕರ ಸಂವಾದ ಸಭೆ

**ಹಂಪಿ ಟೈಮ್ಸ್ ಹೊಸಪೇಟೆ**

ಹೊಸಪೇಟೆ ಡ್ಯಾಂ ರಸ್ತೆಯಲ್ಲಿರುವ ನಗರ ಉಪವಿಭಾಗ ಕಚೇರಿಯಲ್ಲಿ ಜೆಸ್ಕಾಂ ಗ್ರಾಹಕರ ಸಂವಾದ ಸಭೆಯನ್ನು ಫೆ.15 ರಂದು ಮಧ್ಯಾಹ್ನ 3.30 ಗಂಟೆಯಿಂದ ಸಂಜೆ 5 ಗಂಟೆವರೆಗೆ ಏರ್ಪಡಿಸಲಾಗಿದ್ದು. ಹೊಸಪೇಟೆ ನಗರದ ವಿದ್ಯುತ್ ಗ್ರಾಹಕರು ಸಭೆಯಲ್ಲಿ ಭಾಗವಹಿಸಿ ಕುಂದುಕೊರತೆ ಪರಿಹರಿಸಕೊಳ್ಳಬಹುದು ಎಂದು ಕಾರ್ಯ ಮತ್ತು ಪಾಲನೆ ಗ್ರಾಮಿಣ ಉಪವಿಭಾಗ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ದಯಾನಂದ ತಿಳಿಸಿದ್ದಾರೆ.

## ಕೃಷಿ ತರಬೇತಿ ಕಾರ್ಯಗಾರಕ್ಕೆ ಹರಪನಹಳ್ಳಿ ರೈತರಿಗೆ ಅಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ಅಂತರ್ಜಲ ನಿರ್ವಹಣೆ, ಜಲ ಭದ್ರತಾ ಯೋಜನೆ ಸಿದ್ದಪಡಿಸುವುದು, ನೀರಿನ ಬೇಡಿಕೆ ಕಡಿಮೆ ಮಾಡುವ ಸೂಕ್ಷ್ಮ ನೀರಾವರಿ ತಾಂತ್ರಿಕತೆಗಳು, ಜಲ ಮರು ಪೂರಣ ಕುರಿತು ಆಸಕ್ತ ರೈತರಿಗೆ ತರಬೇತಿ ಕಾರ್ಯಗಾರ ಹಮ್ಮಿಕೊಳ್ಳಲಾಗಿದೆ ಎಂದು ಕಂಪ್ಲಿಯ ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಸಹಾಯಕ ನಿರ್ದೇಶಕಿ ಸಿ.ಆರ್.ಅಭಿಲಾಷ ತಿಳಿಸಿದ್ದಾರೆ. ಅಟಲ್ ಭೂಜಲ ಯೋಜನೆ ಅಡಿ ಸಮುದಾಯ ಸಹಭಾಗಿತ್ವದಲ್ಲಿ ಫೆ.18 ಬೆ.10 ಗಂಟೆಗೆ ಜಿಲ್ಲೆಯ ಹರಪನಹಳ್ಳಿ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ತರಬೇತಿ ಏರ್ಪಡಿಸಲಾಗಿದೆ. ಹರಪನಹಳ್ಳಿ ತಾಲೂಕಿನಿಂದ 50 ಜನ ರೈತ, ರೈತ ಮಹಿಳೆಯರು ಭಾಗವಹಿಸಲು ಅವಕಾಶವಿದೆ. ತರಬೇತಿಯಲ್ಲಿ ಭಾಗವಹಿಸುವವರು ಮೊ. 6360139316 ಸಂಖ್ಯೆಗೆ ಕರೆ ಮಾಡಿ ನೊಂದಾಯಿಸಿಕೊಳ್ಳಬೇಕು ಎಂದು ತಿಳಿಸಲಾಗಿದೆ.

